# ತಪೋವಾಣಿ

ಸಂ. 6 ಸಂ. 7 ಜುಲೈ 2009 ರೂ.15



ಜ್ಯೋತಿಕಾರ್ಯದ ವಾರ್ತಾಪತ್ರ




ಮಹರ್ಷಿ ಅಮರ (1919-1982)

**ಋಷಿಗಳು ಹೇಳಿಕೊಟ್ಟಂತೆ**
**ನಾವು ಧ್ಯಾನವನ್ನು ಕಲಿಸುತ್ತೇವೆ.**

### ಬೆಳಕು

ಈ ಎಲ್ಲ ಸೃಷ್ಟಿಯ ಹಿಂದಿರುವ ಮಹಾನ್ ಶಕ್ತಿ. ಬೆಳಕು ಸಾಕ್ಷಾತ್ ದೇವರು.

### ಜ್ಯೋತಿಕಾರ್ಯ

ಎಲ್ಲ ಜೀವಜಾಲಕ್ಕೆ ತನ್ನ ಅರಿವು ಮತ್ತು ಅನುಭವಗಳ ಮಟ್ಟವನ್ನು ಮೇಲೇರಿಸಿ ಉತ್ತಮವಾಗಿ ಬದುಕಲು ನೆರವಾಗುವುದು.

### ಜ್ಯೋತಿಜೀವಿಗಳು

ಇಲ್ಲಿ ಮತ್ತು ಮೇಲಿನ ಲೋಕಗಳಲ್ಲಿ ಜೀವಿಸುತ್ತ, ಜ್ಞಾನ ಮತ್ತು ಚೈತನ್ಯಗಳ ಬೆಳಕನ್ನು ಸಂಗ್ರಹಿಸಿ ಹರಡುತ್ತಿರುವ ಋಷಿಗಳು.

### ಸಪ್ತಋಷಿಗಳು

ಎಲ್ಲ ಜೀವಜಾಲಕ್ಕೆ ಇಲ್ಲಿ ಶಾಂತಿ ಪರಿಪೂರ್ಣತೆಗಳೊಂದಿಗೆ ಜೀವಿಸುವ ದಾರಿ ತೋರಿಸಿ, ಕೊನೆಗೆ ತಮ್ಮ ಮೂಲವಾದ ಬೆಳಕಿಗೆ ಮಾರ್ಗದರ್ಶಿಸಲು ಆಯ್ಕೆಗೊಂಡಿರುವ ಮಹಾತ್ಮರು.

### ಮಹರ್ಷಿ ಅಮರ

ಸಪ್ತಋಷಿಗಳೊಂದಿಗೆ ನೇರಸಂಪರ್ಕವಿದ್ದ, ಹೊಸ ಯುಗದ ಉನ್ನತಬದುಕಿಗೆ ಅಗತ್ಯವಾದ ಜ್ಞಾನ ಮತ್ತು ಸೂಚನೆಗಳನ್ನು ಕೆಳತಂದ ಒಬ್ಬ ಮಹಾನ್ ಗುರುವಾಗಿದ್ದರು.

### ಗುರೂಜಿ ಕೃಷ್ಣಾನಂದ

ಮಹರ್ಷಿ ಅಮರರ ನೇರ ಶಿಷ್ಯರು. ಅವರು ಋಷಿಗಳ ಮಾರ್ಗವಾದ ಧ್ಯಾನಯೋಗವನ್ನು ಬೆಳೆಸಿ, ತಪೋನಗರದಲ್ಲಿ ಸಪ್ತಋಷಿಗಳ ಆಧ್ಯಾತ್ಮಿಕ ಕೇಂದ್ರವನ್ನು ಸ್ಥಾಪಿಸಿದ್ದಾರೆ.

### ಸಪ್ತಋಷಿ ಧ್ಯಾನಯೋಗ

ಋಷಿಗಳ ಮಾರ್ಗದರ್ಶನದಲ್ಲಿ ರೂಪುಗೊಂಡಿರುವ, ಧ್ಯಾನ ಮತ್ತು ನಮ್ಮ ಭಾವನೆ-ಆಲೋಚನೆಗಳನ್ನು ಉತ್ತಮಗೊಳಿಸಿಕೊಳ್ಳುವ ಮೂಲಕ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕುಗಳನ್ನು ಸಮರ್ಪಕವಾಗಿ ಜೀವಿಸಲು ನೆರವಾಗುವ ಒಂದು ವಿನೂತನ ಆಧ್ಯಾತ್ಮಿಕ ಮಾರ್ಗ.

### ಪ್ರಮಾಣಗಳು

- ★ ನಾವೆಲ್ಲರೂ ಒಂದು ಮಹಾ ಜ್ಯೋತಿಯ (ದೇವರ) ಕಣಗಳು.
- ★ ಪ್ರೀತಿ ನಮ್ಮ ಸ್ವಭಾವ.
- ★ ಮೌನ ನಮ್ಮ ಭಾಷೆ.
- ★ ಧ್ಯಾನ ನಮ್ಮ ಮಾರ್ಗ.
- ★ ಈ ಪ್ರಪಂಚ ನಮ್ಮ ಆಶ್ರಮ.
- ★ ಇಡೀ ಸೃಷ್ಟಿಯೇ ನಮ್ಮ ಕುಟುಂಬ.
- ★ ದೇವರು ನಮ್ಮ ಗುರು. ಋಷಿಗಳು ನಮ್ಮ ಮಾರ್ಗದರ್ಶಕರು.

## ಅನಿಸಿಕೆಗಳು

**ಗುರೂಜಿ ಕೃಷ್ಣಾನಂದ**

ಒಬ್ಬ ಸಮಾಜ ಸೇವಕರ ಆಶ್ರಮ, ರೋಷಗೊಂಡ ಸರ್ಕಾರದಿಂದ ನೆಲಸಮ ಆಯಿತು. ಟಿವಿ ಸೆಟ್, ಕಂಪ್ಯೂಟರ್‌ಗಳು, ದಾಖಲೆಗಳು, ಪಾತ್ರೆಗಳು, ಆಟದ ಬೊಂಬೆ ಕೂಡ ನಾಶಗೊಳಿಸಲ್ಪಟ್ಟವು. ಆತ ತನ್ನ ಹೆಂಡತಿ ಮತ್ತು ಎರಡು ಚಿಕ್ಕ ಹೆಣ್ಣುಮಕ್ಕಳೊಡನೆ ಒಂದು ಮರದ ಕೆಳಗೆ ರಾತ್ರಿಯನ್ನು ಕಳೆದ. ಅನಂತರ, ಆ ಅನುಭವದ ಬಗ್ಗೆ ಆತನ ಭಾವನೆಗಳೇನು ಎಂದು ಒಬ್ಬ ಪತ್ರಕರ್ತ ಕೇಳಿದಾಗ ಆತ, ಆ ಕೆಲಸವನ್ನು ಕೈಗೆತ್ತಿಕೊಂಡಾಗಲೇ ಅಂಥ ಅನುಭವಗಳನ್ನು ಎದುರಿಸಬೇಕಾಗುತ್ತದೆಂದು ಗೊತ್ತಿತ್ತು ಎಂದು ಉತ್ತರಿಸಿದ. ಆತನಲ್ಲಿ ಶಾಂತಿ, ಸಮಾಧಾನ ಇತ್ತು ಮತ್ತು ಎಳ್ಳಷ್ಟೂ ಕಹಿಯಿರಲಿಲ್ಲ!

ಸತ್ಯಗಳನ್ನು ತಿಳಿಸಿ, ಪ್ರೀತಿಯನ್ನು ಕಲಿಸಿಕೊಟ್ಟಿದ್ದಕ್ಕಾಗಿ ಜೀವಂತವಾಗಿ ದಹಿಸಲ್ಪಟ್ಟವರ, ಶಿಲುಬೆಗೇರಿದವರ ಮತ್ತು ಚಿತ್ರಹಿಂಸೆಗೊಳಪಟ್ಟವರ ಬಗ್ಗೆ ಚರಿತ್ರೆ ತಿಳಿಯಪಡಿಸುತ್ತದೆ. ಅವರೆಲ್ಲರಿಗೆ ತಮ್ಮ ಕೆಲಸ ಕೈಗೆತ್ತಿಕೊಳ್ಳುವ ಮೊದಲೇ ತಮ್ಮ ಅಂತ್ಯಗಳ ಅರಿವಿರುತ್ತದೆ.

ಅವರು ಕೆಲಸವನ್ನು ಆಯ್ಕೆಮಾಡಲು, ಅಂಥ ಕ್ರೌರ್ಯ ಮತ್ತು ಅನ್ಯಾಯಗಳನ್ನು ಎದುರಿಸುವಾಗ ಸಮಾಧಾನ ಮತ್ತು ಧೈರ್ಯದಿಂದ ಇರುವಂತೆ, ಪ್ರೇರೇಪಿಸುವುದು ಯಾವುದು! ಯಾವ ಹುಮ್ಮಸ್ಸು ಅವರಿಗೆ ಅಂಥ ಧೈರ್ಯ ಮತ್ತು ಸ್ಫೂರ್ತಿ ಕೊಡುತ್ತದೆ! ಇದಕ್ಕಾಗಿ ನಾನು ಆಶ್ಚರ್ಯ ಪಡುತ್ತೇನೆ.

ಕೋಪ ಅಂತರವನ್ನು ಸೃಷ್ಟಿಸುತ್ತದೆ. ಕೋಪ ನಮ್ಮನ್ನು ಆತುರಗಾರರನ್ನಾಗಿ ಮಾಡುತ್ತದೆ ಮತ್ತು ನಮ್ಮಲ್ಲಿ ದ್ವೇಷವನ್ನು ಪ್ರಚೋದಿಸುತ್ತದೆ. ಕೋಪದಲ್ಲಿ ನಾವು ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ. ನಮಗೆ ಇದೆಲ್ಲವೂ ತಿಳಿದಿರುತ್ತದೆ. ಆದರೂ ಕೂಡ ನಾವು ಅದಕ್ಕೆ ತುತ್ತಾಗುತ್ತೇವೆ. ಸಂಬಂಧಗಳನ್ನು ಕಳೆದುಕೊಳ್ಳುತ್ತೇವೆ. ಜೀವನದ ಒಂದು ಭಾಗವನ್ನು ಕಳೆದುಕೊಳ್ಳುತ್ತೇವೆ ಮತ್ತು ಆಧ್ಯಾತ್ಮಿಕವಾಗಿ ಕೆಳಗೆ ಬೀಳುತ್ತೇವೆ. ಕೋಪವನ್ನು ಪಕ್ಕಕ್ಕಿಟ್ಟು ಜನಗಳನ್ನು ಮತ್ತು ಜೀವನವನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲವೆ? ಸಾಧ್ಯವಿದೆ. ಆದರೆ ನಾವು ಪ್ರಯತ್ನಿಸುವುದಿಲ್ಲ, ಅಷ್ಟೆ.

ಕೋಪವನ್ನು ಪಕ್ಕಕ್ಕಿಟ್ಟು ಅದು ಇಲ್ಲದಂತೆ ಮಾಡಲು ಸಾಧ್ಯವಿದೆ. ಒಬ್ಬ ವ್ಯಕ್ತಿ ಕ್ಷಮೆ ಕೇಳುವುದಕ್ಕೆ ಮೊದಲೇ ಅಥವಾ ಕ್ಷಮೆ ಕೇಳದಿದ್ದರೂ ಕೂಡ ಅವನನ್ನು ಕ್ಷಮಿಸಲು ಸಾಧ್ಯವಿದೆ. ನಮ್ಮ ಸುತ್ತಲಿನ ಪ್ರಪಂಚದಿಂದ ವಿಚಲಿತರಾಗದೆ, ಹಿಮಾಲಯದಂತೆ ನಿಶ್ಚಲವಾಗಿ, ಧೀಮಂತವಾಗಿ ಇರಲು ಸಾಧ್ಯವಿದೆ. ನಾವು ಆಯ್ಕೆ ಮಾಡಿದಲ್ಲಿ ಎಲ್ಲವೂ ಸಾಧ್ಯ. ಧ್ಯಾನಿಗಳಾದ ನಮಗೆ ಬೇರೆ ರೀತಿಯಲ್ಲಿ ಬದುಕಲು ಆಯ್ಕೆಗಳಿಲ್ಲ. ನಾವು ಪ್ರೀತಿಯನ್ನು ಅಭಿವ್ಯಕ್ತಿಸಬೇಕು ಮತ್ತು ಕ್ಷಮಿಸಬೇಕು. ಇಲ್ಲದಿದ್ದರೆ ಧ್ಯಾನಮಾಡಿ ಏನು ಉಪಯೋಗ? ನಾವು ಮಾಡುವ ಧ್ಯಾನ, ಒಂದು ನಟನೆ ಮತ್ತು ಫ್ಯಾಷನ್ ಆಗುತ್ತದೆ ಅಷ್ಟೆ.

ಮೇ18, 2009ರಂದು ಹೊಸ ಮತ್ತು ಮಹತ್ ಚೈತನ್ಯಗಳನ್ನು ಅಂತರ್-ವನದಲ್ಲಿ ಪ್ರತಿಷ್ಠಾಪಿಸಲಾಯಿತು. ಋಷಿಗಳಿಂದ ಆರಿಸಲ್ಪಟ್ಟ ಏಳು ಜನ, ಜೂನ್8 ರಿಂದ 14ರವರೆಗೆ ಏಳು ದಿನಗಳ ಕಾಲ 'ದಿ ಗ್ರೇಟ್ ರಾ' ಅಂದರೆ 'ಪ್ರಕಾಶ ಬ್ರಹ್ಮ'ನಿಂದ ವಿಶಿಷ್ಟವಾದ ಚೈತನ್ಯಗಳನ್ನು ಚಾನಲ್ ಮಾಡಿದರು. ನಮ್ಮ ವಿಶೇಷ ಚಾನಲ್ ಸುವಾಹಿನಿ ಈ ಭವ್ಯವಾದ ಅವಧಿಯಲ್ಲಿ ಸಂಭವಿಸಿದ ಕೆಲವು ವಿವರಗಳನ್ನು ಗ್ರಹಿಸಿದಳು. ನಾನು ಇದನ್ನು ನಮ್ಮ ಮುಂದಿನ ಪುಸ್ತಕದಲ್ಲಿ ಸೇರಿಸಲು ಇಚ್ಛಿಸಿದ್ದೆ. ಅದರೆ ಅವನ್ನು ಒಂದು ಕಿರು ಹೊತ್ತಿಗೆಯಲ್ಲಿ ಪ್ರಿಂಟ್ ಮಾಡುವುದನ್ನು ನನ್ನಿಂದ ತಡೆದುಕೊಳ್ಳಲಾಗಲಿಲ್ಲ. ಈ ಅದ್ಭುತವಾದ ಮಾಹಿತಿಯನ್ನು ನಮ್ಮ ಮಾನಸ ಕುಟುಂಬದ ಸಾಧಕರೊಂದಿಗೆ ಹಂಚಿಕೊಳ್ಳುವುದಕ್ಕೋಸ್ಕರ ಪ್ರಿಂಟ್ ಮಾಡಿದೆ. ಇದು ಕಟ್ಟುನಿಟ್ಟಾಗಿ ಮಾನಸ ಕುಟುಂಬದವರಿಗೆ ಮಾತ್ರ. ಸಧ್ಯಕ್ಕೆ ಹೊರಗಿನವರಿಗೆ ಅಲ್ಲ.

ಮಾನಸ ಕುಟುಂಬದವರು ಆಫೀಸಿನಲ್ಲಿ ವಿಚಾರಿಸಿ ಈ ಪ್ರತಿಯನ್ನು ಪಡೆಯಬಹುದು.

ನಾನು ಕೆಲವು ದಿನಗಳಿಂದ ಬ್ಲಾಗ್ ಬರಯದೇ ಇರುವುದನ್ನು ನೋಡಿ, ಅನೇಕರು ನನ್ನ ಬಗ್ಗೆ ವಿಚಾರಿಸಿದರು. ಅವರ ಕಾಳಜಿ ಮತ್ತು ಪ್ರೀತಿ ನನ್ನ ಹೃದಯವನ್ನು ತುಂಬುತ್ತವೆ. ಇತ್ತೀಚೆಗೆ ನಾನು ಬ್ಲಾಗ್ ಬರೆಯಲಾಗಲಿಲ್ಲ ಏಕೆಂದರೆ ನಾನು ಸ್ವಲ್ಪ ಕಾಲ ನನ್ನ ಕಾವ್ಯಸ್ಫೂರ್ತಿಯನ್ನು ಕಳೆದುಕೊಂಡಿದ್ದೆ.

ನಾನು ಬ್ಲಾಗ್ ಬರೆಯುತ್ತೇನೆ. ಬರಯುವುದಕ್ಕೆ ಬಹಳ ಇದೆ ಮತ್ತು ಬದುಕೂ ಬಹಳ ಇದೆ.


ಮಾನಸ ಫೌಂಡೇಷನ್ (ರಿ)
ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ 562 149. ಭಾರತ.
✆ (080) 2846 5280, 2271 5501, 93420 30250 (ಬೆಳಗ್ಗೆ 10ರಿಂದ ಮಧ್ಯಾಹ್ನ 1)
ಇ-ಮೇಲ್: info@saptarishis.com ವೆಬ್-ಸೈಟ್: www.saptarishis.com

## ಧ್ಯಾನದ ತರಗತಿಗಳು

### ತಪೋನಗರದಲ್ಲಿ

**ಭಾನುವಾರ** (ಬೆಳಿಗ್ಗೆ 10 ರಿಂದ 11 ಘಂ.)

### ಬೆಂಗಳೂರು ನಗರದಲ್ಲಿ

**ಭಾನುವಾರ** (ಬೆಳಿಗ್ಗೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಸೋಮವಾರ** (ಸಂಜೆ 7 ರಿಂದ 8 ಘಂ.)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮೀ ಲೇಔಟ್

**ಮಂಗಳವಾರ** (ಸಂಜೆ 7 ರಿಂದ 8 ಘಂ.)
ಶ್ರೀ ಅರಬಿಂದೊ ಕಾಂಪ್ಲೆಕ್ಸ್, 1ನೇ ಫೇಸ್,
ಜೆ.ಪಿ. ನಗರ

**ಬುಧವಾರ** (ಸಂಜೆ 7 ರಿಂದ 8 ಘಂ.)
ಆರ್ಯ ಸಮಾಜ, ಸಿ.ಎಂ.ಹೆಚ್. ರೋಡ್,
ಇಂದಿರಾನಗರ

ಹಿಮಾಂಶು, 4ನೆಯ ಮೇನ್, ಮಲ್ಲೇಶ್ವರಂ

ಮಾರುತಿ ಮಂದಿರ, ವಿಜಯನಗರ

**ಗುರುವಾರ** (ಸಂಜೆ 7 ರಿಂದ 8 ಘಂ.)
ದೇವಗಿರಿ ವೆಂಕಟೇಶ್ವರ ದೇವಸ್ಥಾನ
ಬನಶಂಕರಿ 2ನೆಯ ಸ್ಟೇಜ್

**ಶುಕ್ರವಾರ** (ಸಂಜೆ 7 ರಿಂದ 8 ಘಂ.)
ಇಂಡಿಯನ್ ಹೆರಿಟೇಜ್ ಅಕಾಡೆಮಿ
6ನೆಯ ಬ್ಲಾಕ್, ಕೋರಮಂಗಲ

**ಶನಿವಾರ** (ಸಂಜೆ 7 ರಿಂದ 8 ಘಂ.)
ಹಿಮಾಂಶು, 4ನೇ ಮುಖ್ಯರಸ್ತೆ,
ಮಲ್ಲೇಶ್ವರಂ

### ಆನೇಕಲ್ಲಿನಲ್ಲಿ (ರಾಜರಾಜೇಶ್ವರಿ ಬಡಾವಣೆ)

**ಸೋಮವಾರ** (ಸಾಯಂಕಾಲ 6 ರಿಂದ 7 ಘಂ.)
**ಮಂಗಳವಾರ** (ಬೆಳಿಗ್ಗೆ 6 ರಿಂದ 7 ಘಂ.)

ಹೊರಗಿನ ಸಾಧಕರಿಗೆ ಅಂಚೆ ಮತ್ತು ಇ-ಮೇಲ್‌ಗಳ ಮೂಲಕ ಧ್ಯಾನದ ತರಗತಿಗಳು ಲಭ್ಯವಿವೆ. ಹೆಚ್ಚು ಮಾಹಿತಿಗಾಗಿ ಆರನೇ ಪುಟದ ಮೊದಲನೇ ಕಾಲಂ ನೋಡಿ.

**ಡೋರ್‌ವೇಸ್ (ಇಂಗ್ಲಿಷ್)/ತಪೋವಾಣಿ (ಕನ್ನಡ)**
**ಪ್ರಕಾಶ್‌ಮಾರ್ಗ್ (ಮರಾಠಿ)**
**ವಾರ್ತಾಪತ್ರದ ವಾರ್ಷಿಕ ಚಂದಾ ರೂ.200/-**

### ಮಾಸ ಪತ್ರಿಕೆ

ನಿಮ್ಮ ಸ್ನೇಹಿತರಿಗೆ ತಪೋವಾಣಿಯನ್ನು ಉಡುಗೊರೆಯಾಗಿ ಕೊಡಿ. ವಾರ್ಷಿಕ ಚಂದಾ ದೊಂದಿಗೆ ಅವರ ಹೆಸರು ಮತ್ತು ವಿಳಾಸವನ್ನು ನಮಗೆ ಕಳುಹಿಸಿ.





ಎನ್‌ಜಿ ಗೊಲ್ಲಹಳ್ಳಿಯಲ್ಲಿ ನಿರ್ಮಾಣವಾಗುತ್ತಿರುವ ಯಲ್ಲಮ್ಮ ದೇವಸ್ಥಾನ.

### ಸುದ್ದಿ-ಸೂಚನೆ

- 3ಘಂಟೆಗಳ ಕಾಲ ಧ್ಯಾನಮಾಡಲು ಆಸಕ್ತಿಯಿರುವ ದೂರಕಲಿಕೆ ಧ್ಯಾನದ ಸಾಧಕರು, ಪ್ರತಿದಿನ 3ಘಂಟೆ ಧ್ಯಾನಮಾಡಬಹುದು. ಮತ್ತು ಒಂದು ತಿಂಗಳನಂತರ ತಮ್ಮ ಸಾಧನೆಯ ಬಗ್ಗೆ ರಿಪೋರ್ಟ್ ಮಾಡಬೇಕು.
- ಅಂತರ್-ವನದಲ್ಲಿ, ಬೆಳಕಿನ-ಮಂದಿರ (ರಾ_ಟೆಂಪಲ್) ನಿರ್ಮಾಣವಾಗುತ್ತಿದೆ.

### ಧ್ಯಾನಕ್ಕೆ ವಿಶೇಷ ದಿನಗಳು

| | | |
|---|---|---|
| 02 | ಗುರು | ಶುಕ್ಲದಶಮಿ |
| 07 | ಮಂಗಳ | ಗುರುಪೂರ್ಣಿಮಾ, ಚಂದ್ರ ಗ್ರಹಣ 2.02 PM to 4.15 PM |
| 15 | ಬುಧ | ಕೃಷ್ಣ ಅಷ್ಟಮಿ |
| 16 | ಗುರು | ದಕ್ಷಿಣಾಯನ ಪುಣ್ಯಕಾಲ ಪ್ರಾರಂಭ |
| 20 | ಸೋಮ | ಮಾಸ ಶಿವರಾತ್ರಿ |
| 22 | ಬುಧ | ಅಮಾವಾಸ್ಯೆ, ಸೂರ್ಯಗ್ರಹಣ 5.28AM to 10.43 AM |
| 31 | ಶುಕ್ರ | ಮಹಾಲಕ್ಷ್ಮಿ ಪೂಜೆ |

### ಭಾನುವಾರದ ಪ್ರಸಾದವನ್ನು ಪ್ರಾಯೋಜಿಸಿದವರು

| | |
|---|---|
| 03-5-2009 | ಒಬ್ಬ ಹಿತೈಷಿ |
| 10-5-2009 | ಅನ್ನಪೂರ್ಣ ಎಮ್.ಎನ್ ಮತ್ತು ಚಂದ್ರಕಲಾ ಡಿ. |
| 17-5-2009 | ಶಾರದಮ್ಮ ಎಲ್. ಮತ್ತು ಸೆಲ್ವಿ ಕೋಟಿಲಿಂಗಂ |
| 24-5-2009 | ಕೃಷ್ಣಮೂರ್ತಿ ಬಿ.ಎಸ್., ಶಶಾಂಕ್ ಬಿ.ಸಿ. ಮತ್ತು ಅಜಯ್ ಕುಮಾರ್ |
| 31-5-2009 | ಅಂಜಲಿ ಪಾಟಿಲ್ |

### ಈ ತಿಂಗಳು ತಪೋನಗರದಲ್ಲಿ

| | |
|---|---|
| ಜೂಲೈ 7 | ಗುರು ಪೂರ್ಣಿಮಾ ವಿಶೇಷ ಧ್ಯಾನ: ಮಧ್ಯಾಹ್ನ12 ರಿಂದ 1 ರವರೆಗೆ<br>ಚಂದ್ರ ಗ್ರಹಣ ವಿಶೇಷ ಧ್ಯಾನ: ಮಧ್ಯಾಹ್ನ2.02 ರಿಂದ ಸಾಯಂಕಾಲ 4.15 ರವರೆಗೆ |
| ಜುಲೈ 12 | ಶಂಬಲ ವಿಶೇಷ ಗ್ರೂಪ್ ಮಧ್ಯಾಹ್ನ 2ಗಂಟೆಗೆ ಸಂಧಿಸುತ್ತದೆ. |
| ಜುಲೈ 22 | ಸೂರ್ಯಗ್ರಹಣ ವಿಶೇಷ ಧ್ಯಾನ: ಬೆಳಿಗ್ಗೆ 5.28 ರಿಂದ 10.43 ರವರೆಗೆ |

### ಆನೇಕಲ್ ಕೇಂದ್ರದಲ್ಲಿ ಕಾರ್ಯಕ್ರಮ

- ಪ್ರತಿ 5ನೇ ಭಾನುವಾರ, ಬೆಳಿಗ್ಗೆ 11 ರಿಂದ 1ರವರೆಗೆ, ಆನೇಕಲ್ಲಿನ ವಿವಿಧ ಆಧ್ಯಾತ್ಮಿಕ ಗುಂಪುಗಳ ಸಾಧಕರು ಸಪ್ತರ್ಷಿ ಧ್ಯಾನ ಕೇಂದ್ರದಲ್ಲಿ ಮಿನಿ-ಸಮಾವೇಶಕ್ಕಾಗಿ ಸೇರುತ್ತಾರೆ.
- 25-5-2009 ರಂದು ನಮ್ಮ ಸಪ್ತರ್ಷಿ ಧ್ಯಾನ ಕೇಂದ್ರದಲ್ಲಿ ಗುರೂಜಿಯವರ 70ನೇ ಜನ್ಮದಿನವನ್ನು ಆಚರಿಸಲಾಯಿತು.
- 31-5-2009 ರಂದು ಸಪ್ತರ್ಷಿ ಧ್ಯಾನ ಕೇಂದ್ರದಲ್ಲಿ ನಡೆದ ಮಿನಿ-ಸಮಾವೇಶದಲ್ಲಿ 5 ಆಧ್ಯಾತ್ಮಿಕ ಮಾರ್ಗಗಳಿಂದ ಒಟ್ಟು 50 ಧ್ಯಾನಿಗಳು ಸೇರಿದ್ದರು.

**ಈ ತಿಂಗಳ ವಾರ್ತಾಪತ್ರಿಕೆಗಳನ್ನು ಪ್ರಾಯೋಜಿಸಿದವರು**
ಶ್ರೀಮತಿ. ನಿರ್ಮಲ ಬಾಲಕೃಷ್ಣನ್

**"ತಪೋವಾಣಿ"ಯ ಮುದ್ರಣಕ್ಕೆ ರೂ. 5000 ಮತ್ತು ಭಾನುವಾರದ ಪ್ರಸಾದವನ್ನು ಪ್ರಾಯೋಜಿಸುವುದಕ್ಕೆ ರೂ. 2000.**

## ತಪೋನಗರ ಡೈರಿ

**ಸೀಮಾ ಅಲ್‌ಮೇಲ್; ಅನು: ಭಾಗ್ಯವತಿ**

ಮೇ ತಿಂಗಳಲ್ಲಿ ಬರುವ ಗುರೂಜಿಯವರ ಜನ್ಮದಿನವು, ಇಡೀವರ್ಷದಲ್ಲಿ ಈ ತಿಂಗಳನ್ನು ಅತ್ಯುತ್ತಮವನ್ನಾಗಿ ಮಾಡಿದೆ. ಮೇ 17ರ ರಾತ್ರಿ ತಪೋನಗರದ ನಿವಾಸಿಗಳು ಜನ್ಮದಿನದ ಸಮಾರಂಭವನ್ನು ಡೈನಿಂಗ್ ಹಾಲ್‌ನಲ್ಲಿ ಏರ್ಪಡಿಸಿದ್ದರು. ಐವತ್ತಕ್ಕಿಂತಲೂ ಹೆಚ್ಚು ಉತ್ಸಾಹಭರಿತ ಸಾಧಕರು ಈ ಕೂಟದಲ್ಲಿ ಭಾಗವಹಿಸಿದ್ದರು. ಹಲವು ಸಡಗರಭರಿತ ನಿವಾಸಿಗಳು ಆ ಸ್ಥಳವನ್ನು ವಿಶೇಷವಾಗಿ ಅಲಂಕರಿಸಿದ್ದರು.

ವಿಶ್ವವು ಮೇ 18 ರಂದು ಗುರೂಜಿಯವರಿಗೆ ಅತ್ಯಂತ ಉತ್ಕೃಷ್ಟವಾದ ಕಾಣಿಕೆಯನ್ನು ಕೊಟ್ಟಿತು. ಅಂತರ್–ವನ ಉದ್ಘಾಟನೆಯ ಸಂದರ್ಭದಲ್ಲಿ ರಾ–ಬೆಳಕನ್ನು ಸಂಗ್ರಹಿಸಲಾಯಿತು. ಈ ವನವು ಅಂತರ್–ಮಾನಸದ ಪಕ್ಕದಲ್ಲಿರುವ ರಮಣೀಯವಾದ ಪಾರ್ಕ್. ಈ ಸ್ಥಳವು ಈಗಷ್ಟೇ ಸಿದ್ಧಗೊಂಡಿದ್ದರೂ ಕೂಡ ಚೈತನ್ಯಗಳಿಂದ ತುಂಬಿದೆ. ಇಲ್ಲಿಯ ಪರಿಸರ ಮತ್ತು ಎನರ್ಜಿಗಳು ನಮ್ಮಲ್ಲಿರುವ ಪವಿತ್ರ ಸ್ಥಾನವನ್ನು ಪ್ರವೇಶಿಸಲು ಸಹಾಯವಮಾಡುತ್ತವೆ. ಇದಕ್ಕಾಗಿಯೇ ಈ ಸ್ಥಳವನ್ನು 'ಅಂತರ್–ವನ' ಎಂದು ಸೂಕ್ತವಾಗಿ ಹೆಸರಿಸಲಾಗಿದೆ. ಗಿಡಗಂಟೆಗಳ ಮಧ್ಯೆ ಇರುವ ಈ ವನ, ಅಚ್ಚುಕಟ್ಟಾಗಿ ಕತ್ತರಿಸಿದ ಸಸ್ಯಗಳು ಒಪ್ಪವಾಗಿ ಅಣಿಗೊಳಿಸಿರುವ ದಾರಿಗಳನ್ನು ಹೊಂದಿದ್ದು, ಹಿತವಾದ ಭಾವನೆಯನ್ನು ಉಂಟುಮಾಡುತ್ತವೆ. ಹತ್ತಿರದಲ್ಲಿಯೇ ಒಂದು ಬಾವಿಯೂ ಇದೆ. ಬೋರ್‌ವೆಲ್ ಪೈಪೊಂದು ಬಾವಿಗೆ ಸತತವಾಗಿ ನೀರನ್ನು ಪಂಪ್ ಮಾಡುತ್ತಿರುತ್ತದೆ. ಇದು ಹತ್ತಿರದಲ್ಲಿಯೇ ಜುಳು ಜುಳು ಹರಿಯುವ ಹೊಳೆ ಇದೆಯೇನೋ ಎಂಬ ಭಾವನೆಯನ್ನು ಮೂಡಿಸುತ್ತದೆ.

ಮೇ 24 ರ ಭಾನುವಾರ ಗುರೂಜಿಯವರ 70 ನೇ ಜನ್ಮದಿನವನ್ನು ಆಚರಿಸಲಾಯಿತು. ತಪೋನಗರವನ್ನು ನೂರಾರು ಹೂಗಳಿಂದ ಅಲಂಕರಿಸಲಾಗಿತ್ತು, ಸಿದ್ಧತೆಗಳು ಬೆಳಗ್ಗೆ 6 ಘಂಟೆಗೆ ಆರಂಭಗೊಂಡಿದ್ದವು, ತಯಾರಿಸಿದ ಆಹಾರವು ಸರಳವಾಗಿದ್ದರೂ, ಎಂದಿನಂತೆ ರುಚಿಕರವಾಗಿತ್ತು. 400ಕ್ಕೂ ಹೆಚ್ಚು ಜನರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಗುರೂಜಿಯವರ ಬಗ್ಗೆ ಇರುವ ಆಳವಾದ ಪ್ರೀತಿಯನ್ನು ಜನರು ಹೂಗಳು, ಉಡುಗೊರೆಗಳು, ಹರ್ಷಗಳಿಂದ ವ್ಯಕ್ತಪಡಿಸಿದರು. ಅವರ ಭಾವನೆಗಳು ಮನಮುಟ್ಟುವಷ್ಟು ಗಾಢವಾಗಿದ್ದವು.

ಹತ್ತು ಪುಸ್ತಕಗಳು ಬಿಡುಗಡೆಯಾದವು. ಲೇಖಕರನ್ನು ಮತ್ತು ಅನುವಾದಕರನ್ನು ಗೌರವಿಸಲಾಯಿತು. 'ಲೈಟ್' ಕಿರುಪುಸ್ತಕದ ಎಲ್ಲಾ ಪ್ರತಿಗಳು ಆ ದಿನವೇ ಮುಗಿದುಹೋದವು. ಇದೇ ದಾಖಲೆಯಲ್ಲ ಎನ್ನುವಂತೆ ನಂತರದ ಒಂದು ಸಾವಿರ ಪ್ರತಿಗಳೂ ಕೂಡ ಮುಂದಿನ ಕೆಲವೇ ದಿನಗಳಲ್ಲಿ ಖಾಲಿಯಾದವು!

ಗುರೂಜಿಯವರು ವೈಯುಕ್ತಿಕವಾಗಿ ಪ್ರತಿಯೊಬ್ಬರನ್ನೂ ಆಶೀರ್ವದಿಸಿದರು. ಅವರ ಜನ್ಮದಿನದಂದು ಎಲ್ಲರಿಗೂ ತಾವೊಂದು ಅಪರೂಪದ ಉಡುಗೊರೆ ಪಡೆದ ಭಾವನೆಯಿತ್ತು. ▫

## ಸಾಮರಸ್ಯ

**ವೈಶಾಲಿ ಜೋಶಿ; ಅನು: ಕೆ.ರಾಮಚಂದ್ರ**

ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಚಿಕ್ಕ ಗೂಡಿನಲ್ಲಿ ವಾಸಿಸುತ್ತಾನೆ. ಅದು ಆಂತರಿಕ ಮತ್ತು ಬಾಹ್ಯ ಪ್ರಪಂಚಗಳನ್ನು ಒಳಗೊಂಡಿರುತ್ತದೆ. ಒಂದು ಇನ್ನೊಂದರ ಜೊತೆ ಸಾಮರಸ್ಯದಿಂದಿರಲು ಪರಮಾತ್ಮನು ಅವುಗಳನ್ನು ಸೃಷ್ಟಿಸಿದ್ದಾನೆ. ಅವುಗಳ ಸಾಮರ್ಥ್ಯವನ್ನು ದುರುಪಯೋಗ ಮಾಡಿಕೊಂಡಾಗ ಘರ್ಷಣೆ ಶುರುವಾಗುತ್ತದೆ. ನಾವು ವ್ಯಕ್ತಿಯನ್ನು ಬಿಡಿ–ಬಿಡಿಯಾಗಿ ನೋಡಿದಾಗ ಸಾಮರಸ್ಯ ಇಲ್ಲದಿರುವಂತೆ ಭಾಸವಾಗುತ್ತದೆ. ಆದರೆ ಎಲ್ಲವನ್ನೂ ಒಟ್ಟುಗೂಡಿಸಿ ನೋಡಿದಾಗ ಎಲ್ಲವೂ ವಿಶ್ವದ ಲಯಬದ್ಧ ಸಾಮರಸ್ಯದಲ್ಲಿ ಒಂದಾಗಿರುವುದು ತಿಳಿಯುತ್ತದೆ.

ನಿಜವಾಗಿಯೂ ನಾವು ನಮ್ಮೊಳಗೇ ಇರುವ ಶಾಂತಿ ಮತ್ತು ಸಾಮರಸ್ಯಗಳಿಗಾಗಿ ಹಂಬಲಿಸುತ್ತೇವೆ ಆದರೆ ಪ್ರಾಪಂಚಿಕ ವಸ್ತುಗಳು, ವಸ್ತು ವ್ಯಾಮೋಹ, ಅಧಿಕಾರ ಮತ್ತು ಅಂತಸ್ತುಗಳ ಹಿಂದೆ ಓಡುತ್ತೇವೆ. ನಮ್ಮ ಮನಸ್ಸನ್ನು ಶಾಂತಗೊಳಿಸಿ, ಅದನ್ನು ಅಂತರಂಗದೆಡೆಗೆ ತಿರುಗಿಸಿದಾಗ ಮಾತ್ರ ನಾವು ನಮ್ಮ ಜೀವನ ಮತ್ತು ಪ್ರಕೃತಿಯಲ್ಲಿ ಅಡಗಿರುವ ಸಾಮರಸ್ಯವನ್ನು ತಿಳಿಯಬಹುದು. ಇದಕ್ಕೆ ನಮ್ಮ ಮನಸ್ಸಿನಲ್ಲಿ ಪಾವಿತ್ರ್ಯತೆ ಇರಬೇಕು; ಅದಕ್ಕಾಗಿ ಕೆಟ್ಟ ಯೋಚನೆಗಳನ್ನು ನಿರಾಕರಿಸಬೇಕು ಮತ್ತು ಒಳ್ಳೆಯ ವಿಚಾರಗಳನ್ನು ಅವಲಂಬಿಸಬೇಕು. ಎಲ್ಲ ತಪ್ಪು ಅಭಿಪ್ರಾಯಗಳು, ಸಂಬಂಧಗಳು, ಒಡಕುಗಳನ್ನು ಮನಸ್ಸಿನ ಮಟ್ಟದಲ್ಲಿ ಅಂದರೆ ಆಂತರಿಕ ಪ್ರಪಂಚದಲ್ಲಿ, ಮೊದಲು ವಿಶ್ಲೇಷಿಸಬೇಕು. ಮನಸ್ಸಿನಲ್ಲಿ ಸಾಮರಸ್ಯ ಇಲ್ಲದಿದ್ದಾಗ ಹೆಚ್ಚಿನ ಶಕ್ತಿ ವ್ಯಯವಾಗುತ್ತದೆ. ಈ ಶಕ್ತಿಯನ್ನು ಹೆಚ್ಚು ಕ್ರಿಯಾತ್ಮಕವಾಗಿ ಉಪಯೋಗಮಾಡಿಕೊಳ್ಳಬೇಕು. ಮನಸ್ಸಿನ ವಿರೋಧಾಭಾಸಗಳು ನಿಂತಾಗ, ಅದು ಆಂತರಿಕ ಮತ್ತು ಬಾಹ್ಯ ಸಾಮರಸ್ಯದೆಡೆಗೆ ಕರೆದೊಯ್ಯುತ್ತದೆ. ಆಂತರಿಕ ಸಾಮರಸ್ಯ ಅಂತ:ಶಕ್ತಿಯನ್ನು ಹೆಚ್ಚಿಸುತ್ತದೆ ಮತ್ತು ಸಾಮರಸ್ಯವಿಲ್ಲದ ಬಾಹ್ಯ ಸನ್ನಿವೇಶಗಳನ್ನು ಬದಲಾಯಿಸಲು ಶಕ್ತರನ್ನಾಗಿಸಿ ಜೀವನದ ಸಂದಿಗ್ಧ ಪರಿಸ್ಥಿತಿಯನ್ನು ತಡೆದುಕೊಳ್ಳಲು ಸಹಾಯ ಮಾಡುತ್ತದೆ.

ವ್ಯಕ್ತಿಯ ಮಟ್ಟದ ಆಂತರಿಕ ಸಾಮರಸ್ಯದಿಂದ ಮಾತ್ರ ಸಮಾಜ, ದೇಶ ಮತ್ತು ಪ್ರಪಂಚದಲ್ಲಿ ಸಾಮರಸ್ಯ ತರಲು ಸಾಧ್ಯ. ಪ್ರೀತಿ, ಸಂಯಮ, ವಿವೇಕ ಮತ್ತು ಆಂತರಿಕ ಸಾಮರಸ್ಯ ಬೆಳೆಸಿಕೊಂಡಾಗ ನಮ್ಮ ಜೀವನ ಬೆಳಕು ಮತ್ತು ಆನಂದದಿಂದ ತುಂಬುತ್ತದೆ. ▫

## ಲೈಟ್ ಚಾನಲ್ಸ್

**ವಿಶ್ವ ಸಂಚಲನ**

ಇದೊಂದು ಆತ್ಮಪ್ರಜ್ಞೆಯಲ್ಲಿ ನಡೆಯುವ ಸಂಚಲನ. ಈ ಪ್ರಪಂಚವನ್ನು ಬೆಳಕು, ಶಾಂತಿ ತುಂಬಿರುವ ಒಂದು ಸುಂದರ ಪ್ರದೇಶವನ್ನಾಗಿ ಮಾಡುವ ಸಂಚಲನ. ಇಲ್ಲಿ ಭಾಷಣಗಳು, ಬಾವುಟಗಳಿಲ್ಲ. ಇಲ್ಲಿ ಬೆಳಕನ್ನು ಮೇಲಿನಿಂದ ತಂದು ಸುತ್ತಲೂ ಹರಡಿದರೆ ಅಷ್ಟೇ ಸಾಕು. ಉಳಿದ ಎಲ್ಲ ಕೆಲಸವನ್ನೂ ಬೆಳಕೇ ಮಾಡುತ್ತದೆ.

ನಾವು ಬೆಳಕನ್ನು ತಂದು ಹರಡಿದಾಗ, ಅದು ಬೇರೆಯವರ ಹೃದಯಗಳು ಮನೆಗಳನ್ನು ತುಂಬಿ, ಅವರ ಭಾವನೆ–ವಿಚಾರಗಳಲ್ಲಿರುವ ಕತ್ತಲನ್ನು ಬೆಳಕನ್ನಾಗಿ ಪರಿವರ್ತಿಸುತ್ತದೆ. ಆಗ ವ್ಯಕ್ತಿಗಳಲ್ಲಿ ಪರಿವರ್ತನೆಯುಂಟಾಗುತ್ತದೆ. ವ್ಯಕ್ತಿಗಳಿಂದ ಪ್ರಪಂಚ ಪರಿವರ್ತಿತವಾಗುತ್ತದೆ. ಪ್ರಪಂಚದಲ್ಲಿ ಬೆಳಕು ತುಂಬುತ್ತದೆ.

ಈ ಬೆಳಕು ಸಾಧಾರಣ ಬೆಳಕಲ್ಲ. ಯಾವ ಬೆಳಕಿನಿಂದ ಇಡೀ ಸೃಷ್ಟಿ ಬಂದಿದೆಯೋ ಆ ಮೂಲ ಬೆಳಕು. ಈ ಬೆಳಕಿನಲ್ಲಿ ಎಲ್ಲಾ ಇದೆ – ಶಕ್ತಿ, ವಿವೇಕ ಮತ್ತು ಭವಿಷ್ಯ. ಈ ಬೆಳಕು ಕಾಣುವುದಿಲ್ಲ. ಆದರೆ ಎಲ್ಲಾ ಕಡೆ ಇದೆ.

**ನಾವು ಪ್ರತಿದಿನ ಏಳುವಾಗ ಮತ್ತು ಮಲಗುವಾಗ 7 ನಿಮಿಷಗಳ ಕಾಲ ಈ ಬೆಳಕನ್ನು ತಂದು ಹರಡೋಣ. ಹರಡಿ ಪ್ರಪಂಚದಲ್ಲಿ ಪರಿವರ್ತನೆಯನ್ನು ತರೋಣ.**

ಈ ಸಂಚಲನವನ್ನು 18–5–2008 ರಂದು, ಗುರೂಜಿ ಕೃಷ್ಣಾನಂದರ ಮೂಲಕ, ಸಪ್ತಋಷಿಗಳು ಪ್ರಾರಂಭಿಸಿದರು.

ಈ ಸಂದೇಶವನ್ನು ಬೇರೆಯವರಿಗೆ ಹರಡಿ. ಈ ಸಂಚಲನವನ್ನು ಬೆಳೆಸಿ. ನಮ್ಮ ವೆಬ್‌ಸೈಟ್ www.lightchannels.com ಗೆ ಬನ್ನಿ.

## ಶಂಬಲದ ತತ್ವಗಳು

**ಶಂಬಲದ ಈ ಏಳು ತತ್ವಗಳನ್ನು ಪುರಾತನ ಋಷಿಗಳು ಕೊಟ್ಟಿದ್ದಾರೆ. ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಶಂಬಲದಲ್ಲಿ ವಾಸಿಸುತ್ತಿರುವ ಜನ ಶಾಂತಿ–ಪೂರ್ಣತೆಗಳಿಂದ, ವೃದ್ಧಾಪ್ಯ ಬಾರದೆ ಯಾವಾಗಲೂ ಯೌವ್ವನದಲ್ಲಿಯೇ, ಬದುಕಿದ್ದಾರೆ.**

1. ನಮ್ಮೊಳಗಿರುವ ಬೆಳಕನ್ನು ಅನುಭವಿಸಿ, ಹೊರಗೆ ತಂದು ಹರಡುವುದು.
2. ಪ್ರೀತಿಯನ್ನು ಅನುಭವಿಸಿ ಸುತ್ತಲೂ ಹರಡುವುದು.
3. ಎಲ್ಲರಲ್ಲಿಯೂ ಮತ್ತು ಎಲ್ಲದರಲ್ಲಿಯೂ ಇರುವ ಚೈತನ್ಯವನ್ನು ಅನುಭವಿಸುವುದು.
4. ದಿನ ನಿತ್ಯದ ಚಟುವಟಿಕೆಗಳನ್ನು ಮೊದಲು ಮನಸ್ಸಿನಲ್ಲಿ ನೆನೆದು, ಅನಂತರ ಪಿಸುಮಾತಿನಲ್ಲಿ ಹೇಳಿ ಅನಂತರ ಕಾರ್ಯಗತ ಮಾಡುವುದು.
5. ಯಾವುದೇ ಗುರಿಯನ್ನು ಸಾಧಿಸುವ ಮೊದಲು, ಅದರ ಬಗ್ಗೆ ಹೆಚ್ಚು ಮಾತನಾಡದೆ ಗುಟ್ಟಾಗಿಡುವುದು.
6. ಧ್ಯಾನದಿಂದ ದೇಹ, ಮನಸ್ಸು ಮತ್ತು ಬುದ್ಧಿಗಳ ಶಕ್ತಿಗಳನ್ನು ಒಟ್ಟುಮಾಡಿ ಅರಿಷಡ್ವರ್ಗವನ್ನು ಗೆಲ್ಲುವುದು.
7. ನಮಗೆ ಬೇಕಾದ ಲೌಕಿಕ ಅಗತ್ಯಗಳ ಬಗ್ಗೆ ನಾವೇ ನಮ್ಮ ತೃಪ್ತಿಯ ರೇಖೆಗಳನ್ನು ಹಾಕಿಕೊಂಡು, ಆಧ್ಯಾತ್ಮಿಕ ಸಾಧನೆಯ ಬಗ್ಗೆ ಗಮನಕೊಡಬೇಕು.

## ಗುರೂಜಿಯವರ ನುಡಿಗಳು

(ಸಂಗ್ರಹ: ಶೋಭ ಕೆ. ರಾವ್, ಅನು: ಶಿವಪ್ರಕಾಶ್ ಎಲ್.)

**03-05-2009**

ನಾನು ಉದ್ದೇಶ ಪೂರ್ವಕವಾಗಿಯೇ ದೀರ್ಘವಾದ ವಿವರಣೆಗಳನ್ನು ಕೊಡುವುದಿಲ್ಲ. ಏಕೆಂದರೆ ನಾವು ಹೆಚ್ಚು ವಿವರಿಸಿದಷ್ಟೂ ಅರ್ಥ ಮಾಡಿಕೊಳ್ಳುವುದು ಕಡಿಮೆ. ಉದಾಹರಣೆಗೆ: ಭಗವದ್ಗೀತೆ. ಶ್ರೀಕೃಷ್ಣನು ನಮಗೆ ಅನೇಕ ವಿಷಯಗಳನ್ನು ಹೇಳಿದ್ದಾನೆ. ಆದರೆ ಅದಕ್ಕೆ ಅನೇಕ ವಿದ್ವಾಂಸರು ತಮ್ಮದೇ ಆದ ರೀತಿಯಲ್ಲಿ ಟೀಕೆ ಟಿಪ್ಪಣಿಗಳನ್ನು ಬರೆದಿದ್ದಾರೆ. ಅವರನ್ನು ನಾನು ಟೀಕಿಸುತ್ತಿಲ್ಲ. ಇಲ್ಲಿರುವ ವಿಷಯವೆಂದರೆ ನಾವು ವಿಷಯಗಳನ್ನು ತಾರ್ಕಿಕವಾಗಿ ಅರ್ಥ ಮಾಡಿ ಕೊಳ್ಳಲು ಪ್ರಯತ್ನಿಸುತ್ತೇವೆ. ಆದರೆ ನಮ್ಮ ತರ್ಕ ಸತ್ಯಕ್ಕಿಂತ ಭಿನ್ನವಾದುದನ್ನು ತರುತ್ತದೆ. ಆದ್ದರಿಂದ ನಾನು ನಿರ್ದಿಷ್ಟವಾಗಿ ಕೆಲವು ವಿಷಯಗಳನ್ನು ಹೇಳಲು ಪ್ರಯತ್ನಿಸುತ್ತೇನೆ. ಅವುಗಳ ಬಗ್ಗೆ ನೀವು ಗಾಢವಾಗಿ ಆಲೋಚಿಸಿ, ಹೆಚ್ಚಿನ ಜ್ಞಾನ ತಾನಾಗಿ ಬರುತ್ತದೆ.

ಈ ವಿಶ್ವದ ಬಗ್ಗೆ ನಮಗೆ ಕರ್ತವ್ಯ ಮತ್ತು ಜವಾಬ್ದಾರಿಗಳಿವೆ. ಕೇವಲ ಸಮಾಜ, ರಾಷ್ಟ್ರ ಅಥವಾ ಪ್ರಪಂಚದ ಬಗ್ಗೆ ಮಾತ್ರವಲ್ಲ ಇಡೀ ಸೃಷ್ಟಿಯ ಬಗ್ಗೆ. ಅವುಗಳನ್ನು ನಾವು ತಿಳಿದುಕೊಂಡು ನಿರ್ವಹಿಸಬೇಕು. ನಾವು ಇದನ್ನು ಮಾಡದೆ ಹೋದರೆ ನಮ್ಮನ್ನು ಯಾರೂ ಪ್ರಶ್ನಿಸುವುದಿಲ್ಲ, ಶಿಕ್ಷಿಸುವುದಿಲ್ಲ, ವಿಶ್ವ ಸಹಜವಾಗಿ ಇವುಗಳನ್ನು ಗಮನಿಸುವುದಿಲ್ಲ. ಎಲ್ಲವೂ ತನ್ನದೇ ಆದ ನಿಯಮಗಳಿಗೆ ಒಳಪಟ್ಟು ನಡೆಯುತ್ತದೆ. ಇದರ ಬಗ್ಗೆ ಚಿಂತನೆ ಮಾಡಿ.

ಸಂಪ್ರದಾಯಬದ್ಧ ಅಧ್ಯಾತ್ಮ-ವಿವೇಕ ಹೇಳುತ್ತದೆ: "ನೀವು ಭಾವೋದ್ವೇಗಗಳನ್ನು ಹೊಂದಿರಬಾರದು." ಆದರೆ ನಾನು ಹೇಳುತ್ತೇನೆ, ನಾವು ಭಾವೋದ್ವೇಗ ಗಳನ್ನು ಹೊಂದಿರಬೇಕು, ಇಲ್ಲವಾದರೆ ನಾವು ಮಾನವ ಜೀವಿಗಳಲ್ಲ. ನಾವು ಭಾವೋದ್ವೇಗ ಹೊಮ್ಮಿಸಿ, ಭಾವುಕರಾಗಿರದೇ ಹೋದರೆ ಜೀವನದಲ್ಲಿ ಅನೇಕ ವಿಷಯಗಳನ್ನು ಕಳೆದು ಕೊಳ್ಳುತ್ತೇವೆ. ಅತಿಭಾವುಕತೆ ತಪ್ಪಲ್ಲ. ನಮ್ಮ ಹಿರಿಯರು ಇವುಗಳಿಗೆ ವಿರುದ್ಧವಾಗಿ ಹೇಳಿದ್ದರೂ ಯಾವುದೋ ಒಂದು ಹಂತದಲ್ಲಿ ಬಹುಶಃ ಇವು ಬೇಕೆನಿಸುತ್ತದೆ. ನಾನು ಹೇಳುತ್ತೇನೆ: "ಜೀವನವನ್ನು ಚೆನ್ನಾಗಿ ಅನುಭವಿಸಬೇಕು, ಭಾವುಕರಾಗಿರಬೇಕು." ಆದರೆ ಇದು ವೈಯುಕ್ತಿಕ ಮಟ್ಟದಲ್ಲಿ ಮಾತ್ರ. ಕೆಲಸದ ವಿಷಯಕ್ಕೆ ಬಂದಾಗ ಅಲ್ಲಿ ಭಾವೋದ್ವೇಗ ಅಥವಾ ಅತಿಭಾವುಕತೆಗಳಿಗೆ ಆಸ್ಪದವಿಲ್ಲ.

ನಾವು ಕೆಲಸವನ್ನು ಗಂಭೀರವಾಗಿ ತೆಗೆದು ಕೊಂಡಾಗ ಎಲ್ಲ ಭಾವೋದ್ವೇಗಗಳು, ಅಥವಾ ಅತಿಭಾವುಕತೆಗಳು, ಎಲ್ಲ ಸಂಬಂಧಗಳು ಮಾಯವಾಗುತ್ತವೆ. ಕೆಲಸದ ಮಹತ್ವ, ಅದರ ಸೌಂದರ್ಯ ನಮಗೆ ತಿಳಿಯುತ್ತದೆ. ಕೆಲಸವೇ ಸಾಧನೆ. ಜನರು ನಿದ್ರಾಹಾರ ತೊರೆದು, ಹಗಲು ರಾತ್ರಿ ಕೆಲಸ ಮಾಡುವಂತೆ ಯಾವುದು ಪ್ರೇರೇಪಿಸುತ್ತದೆ? ಅದು ಪ್ರೇಮ. ಕೆಲಸಕ್ಕಾಗಿ ಪ್ರೇಮ. ದೇವರಿಗಾಗಿ ಪ್ರೇಮ. ನಾವು ಮಾಡುತ್ತಿರುವುದು ದೇವರ ಕೆಲಸ. ಕೆಲಸದ ಬಗ್ಗೆ ಇಂಥ ಪ್ರೇಮವಿರುವಾಗ ಸಾಧನೆಯ ಅಗತ್ಯವಿಲ್ಲ.

---

2012ರಲ್ಲಿ ಹೊಸಯುಗಕ್ಕೆ ಪ್ರವೇಶ ಮಾಡುತ್ತಿರುವುದರ ಪರಿಣಾಮ ಆರ್ಥಿಕ ಹಿನ್ನಡೆಯಂತೆ ಹಂದಿಜ್ವರವೂ ಕೂಡಾ ಅದರ ಒಂದು ಭಾಗವಾಗಿದೆ. ಅಮರರು 1978ರಲ್ಲಿ ಋಷಿಗಳಿಂದ ಪಡೆದ ಸಂದೇಶದಲ್ಲಿ ಹೊಸ ಕಾಯಿಲೆಗಳು ಮತ್ತು ಸಾಂಕ್ರಾಮಿಕ ರೋಗಗಳ ಅಂಶಗಳು ಒಳಗೊಂಡಿದ್ದವು. ಹಂದಿ ಜ್ವರದ ಬಗ್ಗೆ ಬಹುಶಃ ಮೊದಲೇ ಹೇಳಿದ್ದರೆಂದು ತೋರುತ್ತದೆ. ಅಧ್ಯಾತ್ಮದ ಹಂತದಿಂದ ಇದಕ್ಕೆ ಪರಿಹಾರ ದೊರಲೇಬೇಕು. ನಮಗೆ ತಂತ್ರ ವಿಧಾನಗಳ ಜ್ಞಾನವಿದ್ದರೂ, ಅವುಗಳನ್ನು ಬಳಸಿಕೊಳ್ಳುವ ಜ್ಞಾನ ತಿಳಿದಿಲ್ಲ. ನಾವು ವಿಫಲರಾಗಿರುವುದು ಇಲ್ಲೇ. ಮೊದಲು ಸೂಕ್ಷ್ಮಶರೀರಕ್ಕೆ ಕಾಯಿಲೆ ಬರುತ್ತದೆ. ಸೂಕ್ಷ್ಮಶರೀರವನ್ನು ಚಿಕಿತ್ಸೆ ಮಾಡಬಲ್ಲವರಾದರೆ ನಮಗೆ ಕಾಯಿಲೆ ಬರುವುದಿಲ್ಲ. ಯಾವುದೇ ಕಾಯಿಲೆ ಭೌತಿಕ ಶರೀರಕ್ಕೆ ವರ್ಗವಾಗುವುದಕ್ಕೆ ಮೊದಲೇ ತಪ್ಪಿಸಬಹುದು. ಇದನ್ನು ಆಧ್ಯಾತ್ಮಿಕ ಮಟ್ಟದಿಂದ ನಿರ್ವಹಿಸಬಹುದು. ಇದಕ್ಕೆ ವೈಜ್ಞಾನಿಕ ಹಿನ್ನೆಲೆ ಇದೆ.

ಏಕತೆಯನ್ನು ಅನುಭವಿಸುವುದು ಬಹಳ ಮುಖ್ಯ. ಇಡೀ ಮಾನವ ಕುಲದೊಂದಿಗೆ ಏಕತೆಯನ್ನು ಅನುಭವಿಸಿದರೆ, ನಮ್ಮ ಬಲ ಮಾನವ ಕುಲದಷ್ಟೇ ಆಗುತ್ತದೆ. ಹನಿಯೊಂದು ಸಾಗರಕ್ಕೆ ಸೇರಿದಾಗ ಅದು ಅಗಾಧ ಸಾಗರವಾಗುತ್ತದೆ. ಇದೇ ರೀತಿ "ದೈವಿಕತೆಯೊಂದಿಗೆ ಒಂದಾಗಿ, ಬೆಳಕಾಗಿ" ಎಂದು ನಾನು ಹೇಳುತ್ತೇನೆ. ಇದು ಕೇವಲ ಬೆಳಕನ್ನು ಅನುಭವಿಸುವ ಪ್ರಯತ್ನ ಮಾಡುವುದರಿಂದ ಸಂಭವಿಸುವುದಿಲ್ಲ. ನೀವೇ ಬೆಳಕಾಗಬೇಕು, ದೇವರೊಂದಿಗೆ ಒಂದಾಗಬೇಕು. ಆಗ ಅವನ ಶಕ್ತಿಯನ್ನು ಪಡೆಯುವಿರಿ. ಋಷಿಗಳು ಉನ್ನತ ಮಟ್ಟದಲ್ಲಿ ತಪಸ್ಸು ಮಾಡಿ, ದೇವರೊಂದಿಗೆ ಒಂದಾಗುವುದು ಹೀಗೆ. ದೇವರ ಎಲ್ಲ ಶಕ್ತಿಗಳು, ಎಲ್ಲ ಚೈತನ್ಯಗಳು ಅವರ ಬಳಿ ಇವೆ. ಹಾಗೆಯೇ ದೇವರ ಜವಾಬ್ದಾರಿ ಮತ್ತು ಕರ್ತವ್ಯಗಳು ಕೂಡ. ಹೀಗಾದಾಗ ಗ್ಯಾಲಕ್ಸಿಗಳನ್ನು ಸೃಷ್ಟಿಸಬಹುದು. ಯಾವುದೇ ದುಷ್ಟ ಶಕ್ತಿಯನ್ನು ದೂರವಿಡಬಹುದು. ನಿಮ್ಮನ್ನೂ ಒಳಗೊಂಡಂತೆ ಇಡೀ ಮಾನವ ಕುಲದ ಪ್ರೀತಿಯನ್ನು ಪಡೆಯುವಿರಿ. ಇದು ಗಾಢವಾಗಿ ಚಿಂತನೆ ಮಾಡಬೇಕಾದ ವಿಚಾರ. ನಾವು ಗಾಢವಾಗಿ ಚಿಂತನೆ ಮಾಡಿದಾಗ ನಿಗೂಢ ಪ್ರಪಂಚದ ಆಳವಾದ ಭಾಗಗಳಿಂದ ಅನೇಕ ರಹಸ್ಯಜ್ಞಾನ ಬಯಲಾಗುತ್ತವೆ. ಇವು ವೈಯುಕ್ತಿಕ ಜ್ಞಾನ ಆಗುತ್ತವೆ. ನಿಮ್ಮದೇ ಸ್ವಂತ ವೇದಗಳಾಗುತ್ತವೆ.

**10-05-2009**

ನಿಮ್ಮ ಅತೀಂದ್ರಿಯ ಅನುಭವಗಳ ಬಗ್ಗೆ ಎಚ್ಚರವಾಗಿರಿ. ಮನಸ್ಸು ನಮ್ಮನ್ನು ಮೂರ್ಖರನ್ನಾಗಿ ಮಾಡಿ ಸಂತೋಷಿಸುತ್ತದೆ. ಮನಸ್ಸು ಸ್ವತಂತ್ರವಾದ ಅಸ್ತಿತ್ವ ಹೊಂದಿದೆ. ಅದು ಅದ್ಭುತವಾದ ಅತೀಂದ್ರಿಯ ಅನುಭವಗಳನ್ನು ಮತ್ತು ವಿಶನ್‌ಗಳನ್ನು ನೀಡುತ್ತದೆ. ಅದರಿಂದ ನಾವು ಯಾವಾಗಲೂ ಮೂರ್ಖರಾಗಬಾರದು. ಆದ್ದರಿಂದ ನಾನು ಮತ್ತೆ ಮತ್ತೆ ಹೇಳುವುದೆಂದರೆ ನೀವು ಅನುಭವದಿಂದ ಆಚೆ ಹೋಗಿ. ಕೆಲವು ಸಲ ತುಂಬ ಪ್ರಾಮಾಣಿಕವಾದ ಅನುಭವಗಳಾಗುತ್ತವೆ. ನಿಮ್ಮ ಅಂತರ್ಗಹಣ ಶಕ್ತಿಯಿಂದ ಇದನ್ನು ಪರೀಕ್ಷಿಸಬಹುದು. ನಮ್ಮ ಸಾಧನೆ ದುರ್ಬಲ ವಾದಾಗ, ಹೆಚ್ಚು ಅನುಭವಗಳಾಗುತ್ತವೆ ಎಂಬುದನ್ನು ತಿಳಿಯಬೇಕು. ಆದ್ದರಿಂದ ನಮ್ಮ ಅನುಭವಗಳ ಬಗ್ಗೆ ಎಚ್ಚರವಾಗಿದ್ದು, ಅವುಗಳನ್ನು ನಿರ್ಲಕ್ಷಿಸಬೇಕು. ನಮಗೆ ಅತೀಂದ್ರಿಯ ಅನುಭವಗಳು ಯಾವುವು, ಆತ್ಮದ ಅನುಭವಗಳು ಯಾವುವು ಎಂಬುದು ಗೊತ್ತು. ನಾವು ಆತ್ಮದ ಅನುಭವಗಳನ್ನು ಹಿಂಬಾಲಿಸಿ ಹೋಗಬೇಕು.

ಬುದ್ಧಿ ಸ್ವಲ್ಪ ಜ್ಞಾನವನ್ನು ತರುತ್ತದೆ. ಆದರೆ ಅನುಭವ ಮಾತ್ರ ಎಲ್ಲ ಜ್ಞಾನವನ್ನು ತರಬಲ್ಲದು. ಜ್ಞಾನಕ್ಕಿಂತ ಅನುಭವ ಹೆಚ್ಚು ಮುಖ್ಯ. ಇದನ್ನು ತಿಳಿಯುವುದು ಮುಖ್ಯ. ಇದರ ಬಗ್ಗೆ ಚಿಂತನೆ ಮಾಡಿ. ಪ್ರೇಮ, ಶಾಂತಿ, ನಿಶ್ಚಲತೆ, ವಿಶಾಲತೆಗಳ ಬಗ್ಗೆ ಮಾತನಾಡುತ್ತೇವೆ. ಬೌದ್ಧಿಕವಾಗಿ ತಿಳಿದಾಗ ಇವೆಲ್ಲಾ ಕೇವಲ ಪದಗಳಾಗಿ ಉಳಿಯುತ್ತವೆ. ಅನುಭವದಿಂದ ಮಾತ್ರ ಇವನ್ನು ತಿಳಿಯಲು ಸಾಧ್ಯ. ಆದ್ದರಿಂದ ಅನುಭವಿಸಬೇಕು. ಸಾಧನೆಯ ಉದ್ದೇಶವೇ ಇದು. ಧ್ಯಾನ ಅನುಭವದೆಡೆಗೆ ಮುನ್ನಡೆಸುತ್ತದೆ.

ಒಬ್ಬ ವ್ಯಕ್ತಿ ಹೇಳಿದರು: "ನೀವು ವೈಯುಕ್ತಿಕ ಮಂತ್ರ ಮತ್ತು ಧಾರಣ ಕೊಡುತ್ತೇನೆಂದು ಹೇಳುತ್ತೀರಿ ಆದರೆ ಎಲ್ಲರಿಗೂ ಅದೇ ಮಂತ್ರ ಮತ್ತು ಧಾರಣ ಕೊಡುತ್ತೀರಿ." ನಾನು ವಿವರಿಸಿದೆ: "ನೀವು ಸಾಗರದಿಂದ ಒಂದು ಬಾಟಲ್ ನೀರು ತೆಗೆದುಕೊಂಡ ಮೇಲೆ ಅದು ನಿಮ್ಮದಾಗುತ್ತದೆ. ಹಾಗೆಯೇ, ಒಂದೇ ಮಂತ್ರವನ್ನು ನೀವು ತೆಗೆದುಕೊಂಡರೂ, ಅದು ನಿಮ್ಮ ಮಂತ್ರವಾಗುತ್ತದೆ. ನಾವು ಕೇವಲ ಮಂತ್ರವನ್ನು ಮಾತ್ರ ಕೊಡುವುದಿಲ್ಲ, ಪ್ರತಿಯೊಬ್ಬರಿಗೆ ಪ್ರತ್ಯೇಕವಾಗಿ ಚೈತನ್ಯಗಳನ್ನು ಕೊಟ್ಟು ವ್ಯವಸ್ಥೆಯನ್ನು ಶ್ರುತಿಗೊಳಿಸುತ್ತೇವೆ. ಒಂದೇ ಚೈತನ್ಯವನ್ನು ಎಲ್ಲರಿಗೂ ಕಳುಹಿಸುವುದಿಲ್ಲ."

ನಾವು ಪಠ್ಯಕ್ರಮವನ್ನು ಅತ್ಯಂತ ತುರ್ತಾಗಿ ಬದಲಿಸುತ್ತಿದ್ದೇವೆ. ಒಬ್ಬ ವ್ಯಕ್ತಿ ಒಂದು ವರ್ಷ ಮತ್ತು ಮೂರು ತಿಂಗಳಲ್ಲಿ ವಿಮುಕ್ತಿ (enlightenment) ಹಂತಕ್ಕೆ ದೀಕ್ಷೆ ಪಡೆಯಲು ಅರ್ಹತೆ ಗಳಿಸುತ್ತಾನೆ. ಈ ಹಂತದಲ್ಲಿ ಕಾಲದ ಮಿತಿಯಿಲ್ಲ. ನಾವು

## ಗುರೂಜಿಯವರ ನುಡಿಗಳು

**(ಸಂಗ್ರಹ: ಶೋಭ ಕೆ. ರಾವ್, ಅನು: ಶಿವಪ್ರಕಾಶ್ ಎಲ್.)**

ಹೇಳುದೆಲ್ಲವನ್ನೂ ನೀವು ಅನುಸರಿಸಿದರೆ ನೀವು ಜ್ಞಾನೋದಯವನ್ನು ಪಡೆಯುವಿರಿ. ಇದು ನಿಮ್ಮ ಸಾಧನೆಯನ್ನು ಅವಲಂಬಿಸಿದೆ. ಇನ್ನುಮುಂದೆ ನಾವೆಲ್ಲ ಧ್ಯಾನವನ್ನು ದೀರ್ಘಕಾಲ ಮಾಡಲು ಅಭ್ಯಾಸವಮಾಡಬೇಕು. 2012ನೇ ವರ್ಷ ಸಮೀಪಿಸುತ್ತಿರುವುದರಿಂದ ಇದು ಬಹಳ ಮುಖ್ಯ. ಆದ್ದರಿಂದ ಸಮರೋಪಾದಿಯಲ್ಲಿ ಸಿದ್ಧತೆಯಾಗ ಬೇಕಾಗಿದೆ.

2012ಕ್ಕೆ ನಾವು ಸಿದ್ಧರಾಗಬೇಕು. ಫೋಟಾನ್ ಬೆಲ್ಟ್‌ನೊಂದಿಗೆ ಮಾತನಾಡಲು ನಾವು ತರಬೇತಿ ಪಡೆಯಬೇಕು. ಫೋಟಾನ್ ಬೆಲ್ಟ್ ಇನ್ನು ಮುಂದೆ ಗುರು ಆಗುತ್ತದೆ. ಅದರಿಂದ ಸೂಚನೆಗಳನ್ನು ಪಡೆಯಲು ನೀವು ಬದಲಾವಣೆಯಾಗಬೇಕು, ಶ್ರುತಿಗೊಳ್ಳಬೇಕು. ಈ ಮಾರ್ಗ ಧ್ಯಾನ ಮತ್ತು ಗುಣಾತ್ಮಕವಾಗುವಿಕೆಯನ್ನು ಹೇಳುತ್ತದೆ. ಇಂಥ ಬದಲಾವಣೆಯನ್ನು ನಿಮ್ಮಲ್ಲಿ ನೋಡ ಬಯಸುತ್ತೇನೆ.

### 24-05-2009

ನಾವು ಪ್ರತಿ ಜನ್ಮದಿನದಂದು ಹೊಸ ಜನ್ಮ ಪಡೆಯುತ್ತೇವೆ. ದೇಹ ಅದೇ ಆಗಿದ್ದರೂ ಜೀವಕೋಶಗಳು ಭಿನ್ನವಾಗಿರುತ್ತವೆ. ನಾವು ಅದೇ ಮನುಷ್ಯರಾಗಿರುವುದಿಲ್ಲ. ಈ ದಿನ ನಾನು ಭಿನ್ನವ್ಯಕ್ತಿ. ನಿಮ್ಮ ಮುಂದೆ ಹೊಸ ವ್ಯಕ್ತಿ ಕುಳಿತಿದ್ದಾನೆ. ಈ ಸಂದರ್ಭದಲ್ಲಿ ನನ್ನ ವಿಷಯವಾಗಿ ಜನರು ಹೇಳಿದ ಸಾಧನೆಗಳೆಲ್ಲ "ನಿಮ್ಮಿಂದ ಇವೆಲ್ಲಾ ಸಾಧ್ಯ ವಾಯಿತು" ಎಂದು ಹೇಳುತ್ತೇನೆ. ಆಗಾಗ ನಾನು ಶಿಖರದ ಉದಾಹರಣೆಯನ್ನು ಹೇಳುತ್ತೇನೆ. ಒಂದು ಶಿಖರ ಎಷ್ಟು ಎತ್ತರದಲ್ಲಿದೆ ಎಂದು ಅದನ್ನು ಪ್ರಶಂಸಿಸುತ್ತೇವೆ. ನಾನೊಂದು ಶಿಖರದಂತೆ. ಆದರೆ ಪ್ರತಿ ಶಿಖರಕ್ಕೆ ಒಂದು ಆಧಾರವಿರಬೇಕು. ನೀವು ಈ ಆಧಾರ. ಆಧಾರವಿಲ್ಲದೆ ಯಾವ ಶಿಖರವೂ ಇಲ್ಲ. ಈ ವೈಭವವನ್ನು ಹಂಚಿಕೊಳ್ಳೋಣ. ನಾನು ಹೇಳುವುದು ಬೇಕಾದಷ್ಟಿದೆ. ಆದರೆ ನನಗೆ ಹೇಳಲು ಪದಗಳೇ ಸಿಗುತ್ತಿಲ್ಲ. ಏನೋ ನನ್ನನ್ನು ತಡೆಯುತ್ತಿದೆ. ಬಹುಶಃ ನಿಮ್ಮ ಪ್ರೀತಿ ನನ್ನನ್ನು ಮೂಕನನ್ನಾಗಿಸಿದೆ. ನಾನು ಹೇಳಬೇಕೆಂದು ಅಂದುಕೊಂಡಿದ್ದೆಲ್ಲವನ್ನೂ ಈಗ ಹೇಳಲಾರೆ, ಇನ್ನೊಂದು ಸಮಯದಲ್ಲಿ ಹೇಳುತ್ತೇನೆ.

ನನ್ನ ವಿಸ್ತೃತ ಜೀವನದ ಬಗ್ಗೆ ನನಗೆ ಅರಿವಿದೆ. ಅದು ನನ್ನ ಮೂಲಕ ಋಷಿಗಳು ಕೆಲಸ ಮಾಡುವುದರ ಕೃಪೆಯಿಂದ ಆಗಿದೆ. ಆದ್ದರಿಂದಲೇ ನಿಮ್ಮ ಮುಂದೆ ಕುಳಿತಿರಲು ಸಾಧ್ಯವಾಗಿದೆ. ನನ್ನ ಜೀವನದ ಹಿಂದಿನ ಮತ್ತು ಈಗಿನ ಆಗುಹೋಗುಗಳ ಬಗ್ಗೆ ನಿರಾಳತೆ ಇದೆ. ಯಾವ ಪಶ್ಚಾತ್ತಾಪ ಅಥವಾ ದೂರುಗಳಿಲ್ಲ. ನನಗೆ ತಿಳಿದಂತೆ, ಭವಿಷ್ಯದಲ್ಲಿ ಸಂಭವಿಸುವ ಕೆಲವು ಘಟನೆಗಳ ಬಗ್ಗೆ ಕೂಡ ನನಗೆ ನಿರಾಳತೆಯಿದೆ. ಋಷಿಗಳು ಕರೆದ ಕೂಡಲೇ ಹಿಂದಕ್ಕೆ ತಿರುಗಿ ನೋಡದೆ ಈ ದೇಹವನ್ನು ಬಿಟ್ಟು ಹೊರಡಲು ಸಿದ್ಧ. ಯಾವುದೇ ಸಂದರ್ಭದಲ್ಲಿ ಏನನ್ನಾದರೂ ಒಪ್ಪಿಕೊಳ್ಳುತ್ತೇನೆ. ನನ್ನ ಜೀವನ ನನ್ನ ಗುರು ಮತ್ತು ಋಷಿಗಳಿಗೆ ಸೇರಿದುದು. ಅವರು ಇದನ್ನು ಹೇಗೆ ಬೇಕಾದರೂ ಬಳಸಿಕೊಳ್ಳಬಹುದು. ನಾನು ಕೇವಲ ಒಂದು ಸಾಧನ ಮಾತ್ರ.

ನಾನು ಜನರಿಗೆ ತಿಳಿಯಪಡಿಸಲೇಬೇಕು ಎಂದುಕೊಂಡ ವಿಷಯಗಳನ್ನು ಅವರು ಸ್ವೀಕರಿಸದೇ ಇದ್ದಾಗ ನಾನು ಅನೇಕ ಸಲ ಒಂಟಿಯಾಗಿದ್ದೇನೆ ಎನಿಸುತ್ತದೆ. ನಾನು ಒಂಟಿತನವನ್ನು ಅನುಭವಿಸಿದಾಗ, ಹಾಗೆ ಅನಿಸುವುದು ನನ್ನ ಮಾನವ ಅಂಶಕ್ಕೆ ಎಂದೂ ತಿಳಿದಿದ್ದೇನೆ. ನನ್ನ ಇನ್ನೊಂದು ಭಾಗ ಎಂದೂ ಒಂಟಿಯಾಗಿಲ್ಲ. ನಾನು ಯಾವಾಗಲೂ ನನ್ನ ಗುರು ಮತ್ತು ದೇವರೊಂದಿಗೆ ಇದ್ದೇನೆ. ಒಂಟಿ ಯಾಗಿರುವುದಕ್ಕೆ ನಾವು ಯಾರೂ ಗೊಣಗಬಾರದು ಎಂದು ನನಗನಿಸುತ್ತದೆ. ನನಗೆ ಒಂಟಿತನ ನಿಜವಾಗಿಯೂ ಬಹಳ ಸಹಾಯ ಮಾಡಿದೆ. ಅದು ನನಗೆ ಗಾಢವಾಗಿ ಚಿಂತಿಸಲು, ಬೆಳೆಯಲು ಸಹಾಯಕವಾಗಿದೆ. ಒಂಟಿತನ ಅಧ್ಯಾತ್ಮ ಬೆಳವಣಿಗೆಗೆ ಸಹಾಯ ಮಾಡುತ್ತದೆ.

ನಾನು ದೊಡ್ಡ ಮನುಷ್ಯನಲ್ಲ ಆದರೆ ನನ್ನ ಹಿಂದೆ ಋಷಿಗಳಿದ್ದಾರೆ. ನನ್ನಲ್ಲಿರುವ ವಿವೇಕ, ಋಷಿಗಳಿಂದ ಬಂದಿದೆ. ನನ್ನ ಇನ್ನೊಂದು ಭಾಗ ಬೇರೆ ಸ್ಥಳದಲ್ಲಿ ತಪಸ್ಸು ಮಾಡುತ್ತಿರುವುದು ಕೂಡ ನನಗೆ ತಿಳಿದಿದೆ. ನನ್ನ ಶಕ್ತಿ-ಸಾಮರ್ಥ್ಯಗಳ ಬಗ್ಗೆ ನನಗೆ ತಿಳಿಯದೇ ಇಲ್ಲ. ಆದರೆ ನಾನು ಯಾವಾಗಲೂ ಋಷಿಗಳ ಬಗ್ಗೆ ಯೋಚಿಸುತ್ತೇನೆ ಮತ್ತು ವಿನಮ್ರನಾಗಿರುತ್ತೇನೆ.

ನಾನು ಇನ್ನೂ ಹೆಚ್ಚು ಕೆಲಸ ಮಾಡಬೇಕಾಗಿದೆ. ಅದಕ್ಕಾಗಿ ನಿಮ್ಮಿಂದ ಮತ್ತಷ್ಟು ಹಿಂದೆ ಸರಿಯುತ್ತೇನೆ. ನಾನು ಹಿಂದೆ ಸರಿದಷ್ಟೂ, ಹೆಚ್ಚಿನ ಜ್ಞಾನ ಮತ್ತು ಚೈತನ್ಯಗಳಿಂದ ನನ್ನನ್ನು ನಾನು ಸಿದ್ಧಪಡಿಸಿ ಕೊಳ್ಳಬಹುದು. ನಾನು ಪಡೆದ ಜ್ಞಾನ ಅಥವಾ ಚೈತನ್ಯಗಳೆಲ್ಲ ನಿಮಗಾಗಿ. ಆದ್ದರಿಂದ ನಾನು ದೂರ ಉಳಿದಷ್ಟೂ ನಿಮಗೆ ಹೆಚ್ಚು ಅನುಕೂಲ. ನಾನು ದೂರವಾದಷ್ಟೂ ನಿಮ್ಮೊಡನೆ ಹೆಚ್ಚು ಇರುತ್ತೇನೆ ಎಂಬುದು ವಿಪರ್ಯಾಸವೇನಲ್ಲ, ನಾನು ಇನ್ನೊಂದು ನೆಲೆಯಿಂದ ಹೆಚ್ಚು ಕೆಲಸ ಮಾಡಬಲ್ಲೆ. ಆದರೆ ನಿಮಗೆ ಗಂಭೀರವಾದ ಸಮಸ್ಯೆಗಳು ತಲೆದೋರಿದಾಗ ನನ್ನ ಸಹಾಯ ಪಡೆಯಲು ಹಿಂಜರಿಯಬೇಡಿ. ನನ್ನ ಹೆಗಲು ದೊಡ್ಡದು, ಇಡೀ ಪ್ರಪಂಚವೇ ಅದರ ಮೇಲೆ ಒರಗಬಹುದು. ನಿಮಗೆ ಆಧಾರ ನೀಡಲು ಈ ಹೆಗಲು ಸದಾ ಸಿದ್ಧ. ಈ ಭೂಮಿಯ ಮೇಲೆ ನಾನು ಇರುವಾಗ, ನನ್ನನ್ನು ನೀವು ಸದುಪಯೋಗ ಮಾಡಿಕೊಳ್ಳಬೇಕೆಂದು ಹೇಳಲು ಬಯಸುತ್ತೇನೆ.

ಈಗ ಬಹಳ ಸಂಕ್ಷಿಪ್ತ ಹಾಗೂ ಶೀಘ್ರವಾಗಿ ಈ ಕೇಂದ್ರ ಸ್ಥಾಪನೆಯಾದಾಗಿನಿಂದ ನಾವು ಮಾಡಿರುವ ಸಾಧನೆಗಳ ಬಗ್ಗೆ ತಿಳಿಯೋಣ. ನಾವು ಅತ್ಯಂತ ಸ್ಪಷ್ಟವಾಗಿ ನಿರೂಪಿಸಲಾಗಿರುವ ಮಾರ್ಗವನ್ನು ಮತ್ತು ಸುಭದ್ರವಾದ ವ್ಯವಸ್ಥೆಯನ್ನು ಹೊಂದಿದ್ದೇವೆ. ಕೆಲವರು ಈಗಾಗಲೇ ಋಷಿಗಳನ್ನು ಸಂಪರ್ಕಿಸ ಬಲ್ಲರು. ನಾನು ಇಲ್ಲಿ ಇಲ್ಲದಿರುವಾಗಲೂ ಈ ಕೆಲಸ, ಮಾರ್ಗದರ್ಶನ ಮುಂದುವರಿಯುತ್ತವೆ. ಇದೊಂದು ಮಹತ್ಸಾಧನೆ. ನಾವು ಈ ಸಭಾಂಗಣ, ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ, ಅಂತರ್-ಮಾನಸ ಮತ್ತು ಇತ್ತೀಚಿನ ಅಂತರ್-ವನಗಳ ಕೆಳಗೆ ಅಗಾಧವಾದ ಚೈತನ್ಯಗಳನ್ನು ಸಂಗ್ರಹಿಸಿದ್ದೇವೆ. ಈ ಚೈತನ್ಯಗಳು ನಮಗೆ ಮಾತ್ರವಲ್ಲ ಇಡೀ ಪ್ರಪಂಚಕ್ಕಾಗಿ ಮೀಸಲಾಗಿದೆ. ನಾವು ಸಂಗ್ರಹಿಸಿರುವ ಜ್ಞಾನ ಬಹಳ ಮಟ್ಟಿಗೆ ಪುಸ್ತಕಗಳಲ್ಲಿ ಶೇಖರಿತವಾಗಿದೆ. ನನ್ನ ಉಪನ್ಯಾಸ ಗಳು ಈಗ ಡಿ.ವಿ.ಡಿ.ಗಳಲ್ಲಿ ದೊರೆಯುತ್ತವೆ. ನಮ್ಮ ಅಧ್ಯಯನ ಕೇಂದ್ರದಿಂದ ಅಲ್ಪಾವಧಿಯಲ್ಲಿ ಮೂರು ಪುಸ್ತಕಗಳು ಹೊರಬಂದಿವೆ. ಈ ಅಧ್ಯಯನ ಕೇಂದ್ರ ಕಳಶಪ್ರಾಯವಾಗಿದೆ. ನಾವು ಲೈಟ್ ಚಾನಲ್‌ನ ಸಂಚಲನವನ್ನು ಪ್ರಾರಂಭಿಸಿದ್ದೇವೆ. ನನ್ನ ಮಟ್ಟಿಗೆ ಅತ್ಯಂತ ಮಹತ್ವದ ಸಾಧನೆಯೆಂದರೆ ನಿಮ್ಮೆಲ್ಲರನ್ನೂ ಒಂದು ಮಾನಸ ಕುಟುಂಬವಾಗಿ ಒಟ್ಟು ಗೂಡಿಸಿರುವುದು.

ನಮ್ಮ ಮುಂದಿನ ಗುರಿಗಳೇನು? ಕೆಲವನ್ನು ಇಲ್ಲಿ ಹೆಸರಿಸುತ್ತೇವೆ. ಅತ್ಯಂತ ಮುಖ್ಯ ಮತ್ತು ತುರ್ತಾದ ಗುರಿಯೆಂದರೆ, ಬೆಳಕಿನ ಬಗ್ಗೆ ಜಾಗೃತಿಯನ್ನು ಹರಡುವುದು. ನಮ್ಮ ಮುಂದಿನ ಗುರಿ, ಜನರನ್ನು ತಯಾರು ಮಾಡಿ, 2012ನ್ನು ಸುಲಭವಾಗಿ ದಾಟಲು ತರಬೇತಿ ನೀಡುವುದು, ನಂತರ ಏಕತೆಯನ್ನು ಮೂಡಿಸುವುದು. ನನ್ನ ಮಹತ್ವಾಕಾಂಕ್ಷೆ, ಬೆಳಕಿನ ಕಾರ್ಯಕರ್ತರನ್ನೆಲ್ಲ ಒಂದು ವೇದಿಕೆಯ ಮೇಲೆ ಸೇರಿಸುವುದು. ಮುಂದೆ ಎಂದಾದರೊಂದು ದಿನ ಇದು ಸಂಭವಿಸುತ್ತದೆ. ನನ್ನ ಮುಂದಿನ ಗುರಿ, ಅಧ್ಯಾತ್ಮವೆಂದರೇನು ಎಂಬುದರ ಬಗ್ಗೆ ಜಾಗೃತಿಯನ್ನು ಹರಡುವುದು. ಇತರ ಗುರಿಗಳೆಂದರೆ ಋಷಿಗಳು ಮತ್ತು ದೇವರೊಡನೆ ನೇರವಾಗಿ ಸಂಪರ್ಕ ಸಾಧಿಸಲು ಪ್ರತಿಯೊಬ್ಬರಿಗೂ ನೆರವಾಗುವುದು, ಜನರಲ್ಲಿ ಮೌಲ್ಯ ವ್ಯವಸ್ಥೆಯ ಬಗ್ಗೆ ಜಾಗೃತಿ ಮೂಡಿಸಿ ಅದನ್ನು ಪ್ರಜ್ಞಾಪೂರ್ವಕವಾಗಿ ಅನುಸರಿಸುವಂತೆ ಮಾಡುವುದು. ನನ್ನಲ್ಲಿ ಇವೆಲ್ಲಕ್ಕೂ ಕಾರ್ಯ ಯೋಜನೆಗಳಿವೆ.

ಈ ದಿನ ನಿಮ್ಮ ಜೀವನವನ್ನು ಬದಲಿಸುವಂತಹ ಮಂತ್ರವನ್ನು ಕೊಡುತ್ತೇನೆ. ಇದನ್ನು ಮನಃಪೂರ್ವಕವಾಗಿ ಅಭ್ಯಾಸಮಾಡಬೇಕು:

"ಕೋಪವನ್ನು ಬಿಡಿ ಮತ್ತು ವಿನಯವನ್ನು ಆಲಂಗಿಸಿ." ■

## ಹೊರಗಿನವರಿಗೆ ಧ್ಯಾನಕಲಿಕೆ

ಧ್ಯಾನದ ತರಗತಿಗಳಿಗೆ ಬರಲು ಸಾಧ್ಯವಿಲ್ಲದಿರುವವರಿಗೆ ಅಂಚೆ ಮತ್ತು ಇ–ಮೇಲ್‌ಗಳ ಮೂಲಕ ಧ್ಯಾನ ಕಲಿಸಲಾಗುವುದು. ಇಂಗ್ಲಿಷ್‌ನಲ್ಲಿ (ವರ್ಷಕ್ಕೆ ರೂ. 1000/–), ಕನ್ನಡ, ಮರಾಠಿ ಮತ್ತು ಹಿಂದಿಯಲ್ಲಿ (ವರ್ಷಕ್ಕೆ ರೂ. 700/–) ಪಾಠಗಳನ್ನು ಕಳುಹಿಸಲಾಗುವುದು.

ವಾರ್ಷಿಕ ಫೀನಲ್ಲಿ ಪಠ್ಯ ಪುಸ್ತಕಗಳು ಮತ್ತು ವಾರ್ತಾಪತ್ರಿಕೆಯ ಒಂದು ವರ್ಷದ ಚಂದಾ ಸೇರಿರುತ್ತದೆ.

- ★ ಎಲ್ಲಾ ಸೂಚನೆಗಳನ್ನು ಪೋಸ್ಟ್ ಅಥವಾ ಇ–ಮೇಲ್ ಮೂಲಕ (ಆಯ್ಕೆ ಮಾಡಿದಂತೆ) ಆಯಾ ಭಾಷೆಯಲ್ಲಿ ಕಳುಹಿಸಿ ಕೊಡಲಾಗುವುದು.
- ★ ಸೂಕ್ಷ್ಮ ಮಟ್ಟದಲ್ಲಿ, ಋಷಿಗಳು ದೀಕ್ಷೆಯನ್ನು ಕೊಡುತ್ತಾರೆ ಮತ್ತು ಸಾಧನೆಯ ಪ್ರಗತಿಯನ್ನು ಗಮನಿಸುತ್ತಾರೆ.
- ★ ಎಲ್ಲಾ ಪ್ರಶ್ನೆಗಳಿಗೆ ಮತ್ತು ಸಂದೇಹಗಳಿಗೆ ಗುರೂಜಿಯವರೇ ಉತ್ತರಿಸುತ್ತಾರೆ.
- ★ ನಮ್ಮ ಮಾರ್ಗ ಮತ್ತು ಸಾಧನೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳು ನಮ್ಮ ಎಲ್ಲ ಪುಸ್ತಕಗಳನ್ನು ಓದಬೇಕು.
- ★ ಅಭ್ಯಾಸದ ವರದಿಗಳನ್ನು ಸಕಾಲಕ್ಕೆ ತಲುಪಿಸಬೇಕು. ಸಕಾಲಕ್ಕೆ ವರದಿ ಬಾರದಿದ್ದರೆ, ವಿದ್ಯಾರ್ಥಿ ಧ್ಯಾನ ಮಾಡುತ್ತಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಚೆಕ್/ಡಿಡಿಗಳನ್ನು "ಮಾನಸ ಫೌಂಡೇಶನ್ (ರಿ)" ಹೆಸರಲ್ಲಿ ಕಳುಹಿಸಬೇಕಾಗುತ್ತದೆ. ಬೆಂಗಳೂರೇತರ ಚೆಕ್‌ಗಳಿಗೆ 50ರೂ. ಹೆಚ್ಚಿಗೆ ಸೇರಿಸಬೇಕಾಗುತ್ತದೆ.**

### ಗುರೂಜಿಯವರಿಂದ ವಿಶೇಷ ಸೂಚನೆಗಳು

- ★ ತಾಳ್ಮೆ ಇರಲಿ. ಮೊದಲನೆಯ ದಿನವೇ ಸಮಾಧಿಯ ಅನುಭವವನ್ನು ನಿರೀಕ್ಷಿಸಬೇಡಿ. ಪವಾಡಗಳನ್ನು ನಿರೀಕ್ಷಿಸಬೇಡಿ. ನಾವು ಶ್ರದ್ಧೆಯಿಂದ ಸಾಧನೆಯನ್ನು ಮುಂದುವರಿಸಿದರೆ ಪವಾಡಗಳು ಸದ್ದಿಲ್ಲದೆ ನಡೆಯುತ್ತವೆ.
- ★ ಪ್ರತಿಯೊಬ್ಬರೂ ತಮ್ಮದೇ ರೀತಿಯಲ್ಲಿ ಸೆಣಸಾಟಗಳನ್ನೆದುರಿಸುತ್ತಾರೆ. ಆದರೆ ಸಾಧನೆ ಮುಂದುವರಿದಂತೆ ಎಲ್ಲ ಕರಗಿಹೋಗುತ್ತವೆ.
- ★ ಪ್ರತಿಯೊಬ್ಬರಿಗೂ ತಮ್ಮದೇ ಆದ ಅನುಭವಗಳಾಗುತ್ತವೆ. ಆದರೆ ಅವುಗಳ ಕಡೆ ಹೆಚ್ಚು ಗಮನ ಕೊಡಬಾರದು. ಅನುಭವಗಳು ಒಳ್ಳೆಯದು. ಆದರೆ ಅವು ಸಾಧನೆಯಲ್ಲಿ ಪ್ರಗತಿಯನ್ನು ಅಳೆಯುವುದಿಲ್ಲ.
- ★ ಧ್ಯಾನ ಮಾಡುವಾಗ, ಧ್ಯಾನದ ಕ್ರಿಯೆಗಳನ್ನು ವಿಶ್ಲೇಷಿಸಬಾರದು. ವಿಶ್ಲೇಷಣೆ ಧ್ಯಾನಕ್ಕೆ ಸಹಾಯ ಮಾಡುವುದಿಲ್ಲ.
- ★ ಧ್ಯಾನ ಮಾಡುವಾಗ, ಯೋಚನೆಗಳು ಸಾಮಾನ್ಯ. ಅದರಿಂದ ತಲೆಕೆಡಿಸಿಕೊಳ್ಳಬಾರದು. ಯೋಚನೆಗಳನ್ನು ಓಡಿಸಲು ಪ್ರಯತ್ನ ಮಾಡಬಾರದು. ಅವುಗಳನ್ನು ಗಮನಿಸದೆ ಇರುವುದು ಉತ್ತಮ. ಬೇರೆ ದಾರಿಯೇ ಇಲ್ಲ.

## ಪತ್ರಗಳು

**ಸಂಗ್ರಹ: ವೈಶಾಲಿಜೋಶಿ; ಅನು: ಭಾಗ್ಯವತಿ**

ಕಷ್ಟ, ಕಣ್ಣೀರು, ಅನಾರೋಗ್ಯ ಇಂತಹ ಅನೇಕ ತೊಂದರೆಗಳಿಂದ ಕತ್ತಲೆಯಲ್ಲೇ ಕೊಳೆಯುತ್ತಿದ್ದ ನನ್ನ ಬಾಳಿನಲ್ಲಿ ಬೆಳಕಾಗಿ ಬಂದವರು ನೀವು, ಗುರೂಜಿ. ಋಷಿಗಳ ಧ್ಯಾನಮಾರ್ಗಕ್ಕೆ ಬಂದ ಮೇಲೆ ನನ್ನಲ್ಲಿ ತುಂಬಾ ಬದಲಾವಣೆಯಾಯಿತು. ನಾನು ಯಾವುದೇ ಕೆಲಸ ಮಾಡುತ್ತಿರುವಾಗಲೂ, ಬೆಳಕಿನ ಅಲೆಗಳು ನನ್ನ ಮೇಲೆ ಪ್ರಭಾವ ಬೀರುತ್ತವೆ. ಯಾವುದು ತಪ್ಪು ಯಾವುದು ಸರಿ ಎನ್ನುವ ಬಗ್ಗೆ ಅರಿವನ್ನು ಮೂಡಿಸುತ್ತವೆ.

ನನ್ನ ದಿನನಿತ್ಯದ ಬದುಕಿನಲ್ಲಿ, ಧ್ಯಾನ ಒಂದು ಅವಿಭಾಜ್ಯ ಅಂಗವಾಗಿದೆ. ಗುರೂಜಿಯವರು ಸದಾ ನನ್ನ ಜೊತೆಯಲ್ಲೇ ಇರುವ ಹಾಗೆ ಅನುಭವವಾಗುತ್ತದೆ. ಧ್ಯಾನಕ್ಕೆ ಬರುವ ಮೊದಲು ಮನಸ್ಸಿನಲ್ಲಿ ತುಂಬಾ ಗೊಂದಲವಿತ್ತು. ಈಗ ಮನಸ್ಸಿನಲ್ಲಿ ಯಾವುದೇ ಗೊಂದಲವಿಲ್ಲದೆ ಪ್ರಶಾಂತವಾಗಿರುತ್ತದೆ.

ಈಗ ನನ್ನ ಆರೋಗ್ಯವೂ ಸುಧಾರಿಸಿದೆ. ನನ್ನ ಬದುಕಿನ ಎಲ್ಲಾ ಸಮಸ್ಯೆ ಸಂತೋಷಗಳಿಗೂ ಗುರೂಜಿಯವರ ಸಂದೇಶವನ್ನೇ ಉತ್ತರವಾಗಿಸಿಕೊಂಡು ತೃಪ್ತಿಯಿಂದ ಪ್ರಶಾಂತವಾಗಿ ಸರಳ ಜೀವನ ನಡೆಸುತ್ತಿದ್ದೇನೆ. ಈ ರೀತಿಯಲ್ಲಿ ನನ್ನಂತಹ ಎಷ್ಟೋ ಹೆಣ್ಣುಮಕ್ಕಳಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ದಾರಿದೀಪವಾಗಿರುವ ನಿಮಗೆ ನಾನು ಸದಾ ಚಿರಋಣಿಯಾಗಿರುತ್ತೇನೆ.

—ಪಿ. ಸೌಭಾಗ್ಯ

ಐ–ಗುರೂಜಿ ಭಾಗ–2, ಒಂದು ಕುತೂಹಲಕಾರಿ ಪುಸ್ತಕ. ಈ ಪುಸ್ತಕದಲ್ಲಿ ಅನೇಕ ರಹಸ್ಯಗಳನ್ನು ತೆರೆದಿಡಲಾಗಿದೆ. ಮನಸ್ಸು, ಈ ಪುಸ್ತಕದಲ್ಲಿ ಬರೆದಿರುವ ವಿಷಯಗಳಿಗೆ ಸಾಕ್ಷ್ಯಾಧಾರಗಳನ್ನು ಬಯಸಿದರೂ ಕೂಡ, ಮಹತ್ತಾದ ದೈವಲೀಲೆಯನ್ನು ಅರ್ಥಮಾಡಿಕೊಳ್ಳುವಲ್ಲಿ ನಾವು ಅತ್ಯಂತ ಚಿಕ್ಕವರು ಎಂಬ ಭಾವನೆಯನ್ನು ಉಂಟುಮಾಡುತ್ತದೆ. ಎಲ್ಲಕ್ಕಿಂತಲೂ ಮುಖ್ಯವಾದ ಸಂದೇಶ, "ಸಾಧಕ ಭಗವಂತನಿಗೆ ಶರಣಾಗಬೇಕು ಮತ್ತು ಸಾಧನೆಯನ್ನು ಮುಂದುವರಿಸಬೇಕು."

—ಪ್ರೊ. ಶಾಂತಾರಾಮ್

"2012–ಅಂತ್ಯ ಅಥವಾ ಆರಂಭ" ಪುಸ್ತಕದಲ್ಲಿ ಕೊಟ್ಟಿರುವ ಮಾಹಿತಿ ದಿಗ್ಭ್ರಮೆ ಉಂಟುಮಾಡುತ್ತದೆ. ಆದರೂ ಅದರಲ್ಲಿರುವ ಪ್ರತಿಯೊಂದು ಶಬ್ದವೂ ನಿಜ ಎಂದು ನಾನು ನಂಬುತ್ತೇನೆ. ಬೆಳಕಿನ ಶರೀರಗಳಲ್ಲಿ ಜೀವಿಸುವ 18 ಜನರನ್ನು ಶಂಬಲದಂತಹ ಲೋಕಕ್ಕೆ ಸ್ಥಳಾಂತರಿಸುವುದನ್ನು ಓದಿದಮೇಲೆ ನಮ್ಮ ಶಂಬಲ ಗ್ರೂಪ್ ಧ್ಯಾನದ ಪ್ರಾಮುಖ್ಯತೆಯನ್ನು ನಾನು ಅರ್ಥಮಾಡಿಕೊಳ್ಳುತ್ತಿದ್ದೇನೆ.

—ಒಬ್ಬ ಸಾಧಕರು

'ಅನಿಸಿಕೆಗಳು' ಪುಸ್ತಕ ತುಂಬಾ ವಿಶಿಷ್ಟವಾದುದು. ಅದರ ಪ್ರತಿಯೊಂದು ಶಬ್ದವೂ ಜೀವಂತವಾಗಿದೆ. ಒಂದು ರೀತಿಯ ಮೌನ ಮತ್ತು ಶಾಂತಿ ಪುಸ್ತಕದ ತುಂಬ ಹರಡಿದೆ. ಈ ಪುಸ್ತಕದಲ್ಲಿರುವ ವಿಷಯಗಳು ಎಷ್ಟು ಹೃದಯಸ್ಪರ್ಶಿಯಾಗಿವೆ ಎಂದರೆ ಅವನ್ನು ಓದುತ್ತಿರುವಾಗ ನನ್ನಿಂದ ಆನಂದಬಾಷ್ಪವನ್ನು ತಡೆಯಲಾಗಲಿಲ್ಲ. ಪರಿಶುದ್ಧ ಪ್ರಜ್ಞೆಯನ್ನು ಪ್ರವೇಶಿಸಲು ಧ್ಯಾನ ಒಂದೇ ಕೀಲಿಕೈ ಎಂಬುದನ್ನು, ಈ ಪುಸ್ತಕ ಓದಿದಮೇಲೆ ಅರ್ಥಮಾಡಿಕೊಂಡೆ.

—ಸತ್ಯವಾಣಿ. ಡಿ.

ಜೂನ್ ತಿಂಗಳ ವಾರ್ತಾಪತ್ರಿಕೆಯಲ್ಲಿ ನೀವು ಬರೆದಿರುವ ಮುಕ್ತಾಯ ಹೇಳಿಕೆಯು ನಿಜವಾಗಿಯೂ ನಮ್ಮ ಮೇಲೆ ಆಳವಾದ ಪರಿಣಾಮವನ್ನು ಉಂಟುಮಾಡಿದೆ. ನಮ್ಮೆಲ್ಲರ ಬಗ್ಗೆ ನಿಮಗಿರುವ ಭಾವನೆಗಳು ಮತ್ತು ಪ್ರೀತಿ ನನಗೆ ಅರ್ಥವಾಗುತ್ತದೆ. ಈಗ ತಪ್ಪುಮಾಡಿರುವ ಅಥವಾ ವಿವೇಚನೆ ಇಲ್ಲದೆ ಮುಗ್ಗರಿಸಿರುವ ಜನರೇ ಒಂದು ದಿನ ಮೇಲೇರುತ್ತಾರೆ; ನೀವು ಹೆಮ್ಮೆ ಪಡುವಷ್ಟು ಮೇಲೇರುತ್ತಾರೆ ಎಂಬ ಆತ್ಮವಿಶ್ವಾಸ ನನಗಿದೆ.

—ಏಕನಾಥ್ ಕುಲಕರ್ಣಿ

ನಿಮ್ಮ ಪತ್ರ ನನ್ನಲ್ಲಿ ಮಿಶ್ರ ಭಾವನೆಗಳನ್ನು ಉಂಟುಮಾಡಿದೆ. ಮೊದಲನೆಯದಾಗಿ, ಮಹರ್ಷಿಯೊಬ್ಬರು ತಮ್ಮನ್ನು ತಾವು ಸಾಮಾನ್ಯ ಮನುಷ್ಯನಂತೆ ಪ್ರಕ್ಷೇಪಿಸಿಕೊಂಡು, ನನ್ನಂಥ ಸಾಮಾನ್ಯ ಮನುಷ್ಯನ ಸದ್ಗುಣಗಳನ್ನು ಮೆಚ್ಚಿ ಬರೆದಿದ್ದಕ್ಕಾಗಿ ವಿಪರೀತ ಸಂತೋಷ. ಎರಡನೆಯದಾಗಿ, ನನ್ನನ್ನು ಉನ್ನತ ಸ್ಥಾನದಲ್ಲಿ ಇಟ್ಟಿದ್ದಕ್ಕಾಗಿ ಅತ್ಯಂತ ಸಂಕೋಚ. ಇದರಿಂದ ನೀವು ನನಗೆ ಕಲಿಸಿದ ಪಾಠ, "ಒಬ್ಬ ವ್ಯಕ್ತಿ ಉನ್ನತ ಸ್ಥಾನದಲ್ಲಿದ್ದರೂ, ಅವನ ಶ್ರೇಷ್ಠತೆಯನ್ನು ಅಳೆಯುವ ಮಾಪನ ಆತನ ವಿನಯವಂತಿಕೆ."

—ವಿ.ಎನ್.ಎಸ್. ಮೂರ್ತಿ

ನಿಮ್ಮ ಬಗ್ಗೆ ನನಗೆ ತುಂಬಾ ಪ್ರೀತಿ ಮತ್ತು ಅಭಿಮಾನ, ಏಕೆಂದರೆ ನನ್ನಂತಹ ಹಠದ ಸ್ವಭಾವದವಳಿಗೂ ಕೂಡ ನೀವು ಮೇರೆಯಿಲ್ಲದ ಸಹನೆ ಮತ್ತು ಪ್ರೀತಿಯನ್ನು ತೋರಿಸಿದ್ದೀರಿ. ನಿಮ್ಮ ಮುಂಬೈ ಭೇಟಿಯ ಸಮಯದಲ್ಲಿ ನೀವು ಹೇಳಿದ ಮಾತುಗಳು ನನ್ನ ಶುಷ್ಕ ಹೃದಯಕ್ಕೆ ಸಾಂತ್ವನವನ್ನು ನೀಡಿದವು, ಅದನ್ನು ಚೇತೋಹಾರಿಯನ್ನಾಗಿ ಮಾಡಿದವು.

—ವರ್ಷಾ ಪಾಲ್ಕೆ

## ಪ್ರಶ್ನೆಗಳು ಮತ್ತು ಉತ್ತರಗಳು

(ಸಂಗ್ರಹ: ಶೋಭಾ ಕೆ. ರಾವ್, ಅನು: ಉಷಾ ವಾಸನ್)

**ಪ್ರ: 2012ರ ದೃಷ್ಟಿಯಿಂದ ನಾನು ಹೇಗೆ ತಯಾರಾಗಬೇಕು?**

ಉ: ಧ್ಯಾನ ಮಾಡಿ ಮತ್ತು ಸಕಾರಾತ್ಮಕರಾಗಿ. ನಾವು ಪರಿವರ್ತನೆಗೊಳ್ಳಬೇಕು, ಬದಲಾಗಬೇಕು ಮತ್ತು ಪ್ರತಿಯೊಂದು ರೀತಿಯಲ್ಲೂ ಬೆಳೆಯಬೇಕು. ಪರಿಶುದ್ಧತೆ ಧೈರ್ಯವನ್ನಷ್ಟೇ ಅಲ್ಲ, ವಿವೇಕವನ್ನೂ ತರುತ್ತದೆ. ಈ ಸರಳ ಅಂಶಗಳನ್ನು ಅನುಸರಿಸಿದರೆ ನಾವು ಫೋಟಾನ್ ಬೆಲ್ಟ್-ಅನ್ನು ಸುಲಭವಾಗಿ ಪ್ರವೇಶಿಸಬಹುದು.

**ಪ್ರ: 2012 ಎಷ್ಟರಮಟ್ಟಿಗೆ ನಿಜ?**

ಉ: ನೀವೆಷ್ಟು ನಿಜವೋ, ಅದೂ ಅಷ್ಟೇ ನಿಜ.

**ಪ್ರ: ನಾವಿದನ್ನು ಎಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕು?**

ಉ: ಅದು ನಿಮಗೆ ಬಿಟ್ಟಿದ್ದು. ಅದರ ವಾಸ್ತವತೆಯನ್ನು ಮಾನವಜನಾಂಗ ಅನುಭವಿಸುವುದಕ್ಕಾಗಿ ಅದು ಕಾಯುತ್ತಿದೆ.

**ಪ್ರ: ಬರಿಯ ಆಯ್ಕೆ ಸಾಕೇ?**

ಉ: ಆಯ್ಕೆ ಮಾತ್ರ ಸಾಲದು. ಆಯ್ಕೆ ಮಾಡುವುದು ಪ್ರಥಮ ಭಾಗ ಮಾತ್ರ. ನಮ್ಮ ಆಯ್ಕೆಯನ್ನು ನಾವು ಆಮೂಲಾಗ್ರವಾಗಿ ಅರಿತುಕೊಳ್ಳಬೇಕು ಮತ್ತು ಆಯ್ಕೆಯ ಗುರಿಯನ್ನು ಸಾಧಿಸಲು ಪ್ರಯತ್ನ ಪಡಬೇಕು.

**ಪ್ರ: ಚುನಾವಣಾ ಸಮಯದಲ್ಲಿ ಅಧ್ಯಾತ್ಮಿಗಳಾದ ನಾವು ಏನು ಮಾಡಬೇಕು?**

ಉ: ಬುದ್ಧಿವಂತಿಕೆಯಿಂದ ಮತ ಹಾಕಿ. 'ಬೆಳಕಿಗೆ ಮತ ಹಾಕಿ'. ನೀವು ಮತ ಹಾಕುವ ವ್ಯಕ್ತಿಯಲ್ಲಿ ಬೆಳಕನ್ನು ನೋಡಿ. ಇದು ತುಂಬ ಜವಾಬ್ದಾರಿಯುತ ಕೆಲಸ. ಇದು ಆಧ್ಯಾತ್ಮಿಕ ಕೆಲಸ.

**ಪ್ರ: ಭಿನ್ನ ವಿಚಾರ ಪರಂಪರೆಯ ವ್ಯಕ್ತಿಯೊಂದಿಗೆ ಹೇಗೆ ಸಂಭಾಷಿಸುವುದು?**

ಉ: ಓರ್ವ ಧ್ಯಾನಿ ವಿಶ್ವದ ಗೆಳೆಯ. ಬೇರೊಬ್ಬ ವ್ಯಕ್ತಿ ಇನ್ನೊಂದು ಆತ್ಮ, 'ಮೂಲ'ದ ಒಂದು ಭಾಗ. ನಾವೆಲ್ಲರೂ 'ಮೂಲ'ದ ಭಾಗಗಳು. ಆಧ್ಯಾತ್ಮಿಕ ವ್ಯಕ್ತಿಗೆ ಯಾರೂ ವೈರಿಗಳಲ್ಲ. ಆತ ಎಲ್ಲರನ್ನೂ ಹೊಂದಿಸಿಕೊಂಡು ಹೋಗುತ್ತಾನೆ.

**ಪ್ರ: ಆತ್ಮಗೌರವ ಮತ್ತು ಅಹಂಭಾವಗಳ ನಡುವಿನ ವ್ಯತ್ಯಾಸವೇನು?**

ಉ: ದುರಹಂಕಾರ.

**ಪ್ರ: ನಾವು ಧಾರ್ಮಿಕ ಸಂಪ್ರದಾಯಗಳ ಆಚರಣೆಯನ್ನು ನಿಲ್ಲಿಸಬೇಕೇ?**

ಉ: ಋಷಿಗಳಿಂದಲೇ ಪರಿಚಯಿಸಲ್ಪಟ್ಟ ಸಂಪ್ರದಾಯಗಳಿವೆ ಎಂಬುದನ್ನು ನಾವು ಅರಿತುಕೊಳ್ಳಬೇಕು. ಎಲ್ಲ ಸಂಪ್ರದಾಯಗಳನ್ನು ತ್ಯಜಿಸಬೇಕು ಎಂದು ಹೇಳಲಾಗುವುದಿಲ್ಲ. ಮನುಷ್ಯರು ತಮ್ಮ ಸ್ವಾರ್ಥಕ್ಕೋಸ್ಕರ ಪರಿಚಯಿಸಿದ ಸಂಪ್ರದಾಯಗಳ ವ್ಯತ್ಯಾಸವನ್ನು ವಿವೇಚಿಸಲು ಇದೀಗ ತಕ್ಕ ಸಮಯ. ಆ ಸನ್ನಿವೇಶಗಳನ್ನು ನೀವು ನಿರ್ವಹಿಸಬೇಕು. ಆ ಸಂಪ್ರದಾಯಿಕ ಆಚರಣೆಗಳನ್ನು ಕೂಡ ಹಾಗೆಯೇ ನಿಲ್ಲಿಸಲಾಗುವುದಿಲ್ಲ, ಏಕೆಂದರೆ ಹಾಗೆ ಮಾಡಿದರೆ ಅನಗತ್ಯ ಸಂಘರ್ಷಣೆಗಳಾಗುತ್ತವೆ.

**ಪ್ರ: ಹೊಸಯುಗಕ್ಕೆ ನಮ್ಮ ಮಕ್ಕಳನ್ನು ಹೇಗೆ ತಯಾರು ಮಾಡಬೇಕು?**

ಉ: ಮೊದಲು, ನೀವು ತಯಾರಾಗಿ. ನಾವು ಅವರಿಗೆ ಜ್ಞಾನ, ಅವಕಾಶ ಮತ್ತು ಸೌಲಭ್ಯಗಳನ್ನು ಒದಗಿಸುತ್ತೇವೆ. ಆದರೆ ನಾವು ಅವರಿಗೆ ಅವರಾಗಿಯೇ ಬೆಳೆಯಲು ಬಿಡಬೇಕು. ಅವರಿಗೆ ನಮ್ಮ ಹಳೆಯ, ಸಾಂಪ್ರದಾಯಿಕ ಭಾವನೆಗಳನ್ನು ಬಲವಂತವಾಗಿ ಹೇರದಿರುವುದೇ ನಾವು ಮಾಡುವ ಸಹಾಯ.

**ಪ್ರ: ಸಮಸ್ಯೆಗಳು ನಮ್ಮ ಬೆನ್ನುಹತ್ತಿದಾಗ ನಮ್ಮ ಸಾಧನೆ ಚೆನ್ನಾಗಿರುವುದಿಲ್ಲ. ಇದು ನಿಜವೇ?**

ಉ: ಹೌದು. ನೀವು ನಿಜವಾಗಿಯೂ ಆಧ್ಯಾತ್ಮಿಕರಾದಾಗ ಯಾವ ಸಮಸ್ಯೆಗಳೂ ಇರುವುದಿಲ್ಲ.


**ಪ್ರ: ಕೋಪ ನಮ್ಮ ದೇಹದ ಮೇಲೆ ಪರಿಣಾಮ ಬೀರುವುದೇ?**

ಉ: ಕೋಪ ನಮ್ಮ ದೇಹದ ಮೇಲೆ ಮಾತ್ರವಲ್ಲ ನಮ್ಮ ಮನಸ್ಸು ಮತ್ತು ಬುದ್ಧಿಗಳ ಮೇಲೂ ಪರಿಣಾಮ ಬೀರುತ್ತದೆ. ಕೆಲವುಸಾರಿ ನಮ್ಮ ದೇಹದ ಜೀವಕೋಶಗಳು ನಾಶವಾಗುತ್ತವೆ, ವಿಶೇಷವಾಗಿ ಮೆದುಳಿನ ಜೀವಕೋಶಗಳು.

## ನಮ್ಮ ಪ್ರಕಟಣೆಗಳು

| | |
|---|---|
| Doorways to Light | 200/- |
| New Age Realities | 200/- |
| 2012 - End or Beginning | 120/- |
| iGuruji - Vol 1 | 150/- |
| iGuruji - Vol 2 | 120/- |
| Living in the Light of My Guru | 220/- |
| A Package from the Rishis | 250/- |
| (containing 5 Booklets) | |
| - How to Meditate | |
| - Dhyana Yoga | |
| - Descent of Soul | |
| - Practising Shambala Principles | |
| - Astral Ventures of A Modern Rishi | |
| The Masters Answer | 120/- |
| Channelled Knowledge from the Rishis | 250/- |
| Guruji Speaks Part - I | 200/- |
| Guruji Speaks Part - II | 200/- |
| The Book of Reflections - Vol 1 | 200/- |
| The Book of Reflections - Vol 2 | 200/- |
| Meditators on Meditations | 75/- |
| Meditators on Experiences | 75/- |
| Meditational Experiences | 150/- |
| Awareness | 60/- |
| Living in Light | 10/- |
| Light | 10/- |
| ಬೆಳಕಿಗೆ ಬಾಗಿಲುಗಳು | 150/- |
| ಋಷಿಗಳಿಂದ ಬಂದ ಜ್ಞಾನ | 150/- |
| ಐ-ಗುರೂಜಿ ಭಾಗ 1 | 150/- |
| ಐ-ಗುರೂಜಿ ಭಾಗ 2 | 120/- |
| ಅನಿಸಿಕೆಗಳು | 120/- |
| ಋಷಿಗಳಿಂದ ಬಂದ ಕೊಡುಗೆ | 250/- |
| (ಐದು ಪುಸ್ತಕಗಳು) | |
| – ಧ್ಯಾನ ಮಾಡುವುದು ಹೇಗೆ | |
| – ಧ್ಯಾನ ಯೋಗ | |
| – ಆತ್ಮದ ಅವರೋಹಣ | |
| – ಶಂಬಲ ನಿಯಮಗಳ ಅಭ್ಯಾಸ | |
| – ಆಧುನಿಕ ಋಷಿಯೊಬ್ಬರ ಅತೀಂದ್ರಿಯ ಸಾಹಸಗಳು | |
| ಗುರೂಜಿ ನಾ ಕಂಡಂತೆ | 30/- |
| ಬೆಳಕಿನಲ್ಲಿ ಬದುಕುವುದು | 10/- |
| ದೈವಸಾಕ್ಷಾತ್ಕಾರಕ್ಕೆ ರಾಮಕೃಷ್ಣರ ಮಾರ್ಗದರ್ಶನ | 250/- |
| ಕಾವ್ಯಕಂಠ ವಸಿಷ್ಠ ಗಣಪತಿ ಮುನಿಗಳು | 100/- |
| ಆನೇಕಲ್ಲಿನ ಅಪರೂಪದ ವ್ಯಕ್ತಿಗಳು | 120/- |
| ऋषींकडून मिळालेले ज्ञान (Marathi) | 200/- |
| प्रकाशवाट (Marathi) | 150/- |
| आयगुरूजी (Marathi) | 100/- |
| ध्यान कसे करावे (Marathi) | 50/- |
| ध्यानयोग (Marathi) | 50/- |
| आत्म्याचे पृथ्वीवर अवतरण (Marathi) | 50/- |
| शंबला तत्वांचा अभ्यास (Marathi) | 50/- |
| एका आधुनिक ऋषीचे सूक्ष्मजगातील पराक्रम (Marathi) | 50/- |
| प्रकाशमय जीवन (Marathi) | 10/- |
| ध्यान कैसे करे (Hindi) | 50/- |
| प्रकाशमय जीवन (Hindi) | 10/- |
| प्रकाश की ओर (Hindi) | 150/- |
| தியானம் செய்வது எப்படி | 50/- |
| ஒளியின் வாயில்கள் | 200/- |
| ஒளியில் வாழ்க்கை | 10/- |
| தியான யோகம் | 50/- |
| ஆத்மாவின் அவரோகணம் | 50/- |
| நவீன ரிஷி ஒருவரின் சூஷ்ம சாகசங்கள் | 50/- |
| சம்பலா நியமங்களின் அப்பியாசங்கள் | 50/- |
| ధ్యానం చేయ్యడం ఎలా | 50/- |
| వెలుగులో జీవించడం | 10/- |
| కాంతికి ద్వారములు | 150/- |

RNI. No. KARKAN/2003/13739 Registered Postal Regn. No. CPMG/KA/CNA-48/2009-11
Date of posting Newsletter-25th of Every Month. No. of Pages-8



ಗುರೂಜಿ ಕೃಷ್ಣಾನಂದ (1939)

### ಮಾನಸ ಫೌಂಡೇಷನ್ (ರಿ)

1988ರಲ್ಲಿ ಗುರೂಜಿ ಕೃಷ್ಣಾನಂದರಿಂದ ಸ್ಥಾಪನೆಯಾದ ಈ ಸಂಸ್ಥೆ ಜ್ಯೋತಿಕಾರ್ಯಕ್ಕೆ ಮೀಸಲಾಗಿದ್ದು, ತಪೋನಗರ ಮತ್ತು ಬೆಂಗಳೂರಿನಲ್ಲಿ ಧ್ಯಾನ ತರಗತಿಗಳನ್ನು ನಡೆಸುತ್ತದೆ.

### ಮಾನಸ

ಬೆಂಗಳೂರಿನಿಂದ ಇಪ್ಪತ್ತು ಕಿಲೋಮೀಟರ್ ದೂರದ ಚಿಕ್ಕಗುಬ್ಬಿ ಹಳ್ಳಿಯ ಬಳಿ ರೂಪುಗೊಳ್ಳುತ್ತಿರುವ ಧ್ಯಾನಾಭ್ಯಾಸಿಗಳ ಬಡಾವಣೆ. 1935ರಲ್ಲಿ ಅಮರರಿಗೆ ಇಲ್ಲಿ ಋಷಿಗಳ ಚಟುವಟಿಕೆಗಳ ಮತ್ತು ಭವಿಷ್ಯದಲ್ಲಿ ಸ್ಥಾಪನೆಯಾಗುವ ಬೆಳಕಿನ ನಗರದ ದರ್ಶನವಾಗಿತ್ತು. ವಿಶ್ವಚೇತನ ಮಂದಿರ, ಕುಂಡಲಿನಿ ಗೋಪುರ ಮತ್ತು ತಪೋವನ ಇಲ್ಲಿ ಧ್ಯಾನಮಾಡಲು ರೂಪುಗೊಂಡಿರುವ ವಿನೂತನ ಸ್ಥಳಗಳು. ತಪೋನಗರದ ಸುತ್ತಲೂ 'ಮಾನಸಿ' ಎಂಬ ವಿಭಿನ್ನ ಚೈತನ್ಯವಲಯವನ್ನು ನಿರ್ಮಿಸಿ, ಅದರಲ್ಲಿ ವಿಶೇಷ ಚೈತನ್ಯಗಳನ್ನು ಸಂಗ್ರಹಿಸಿಡಲಾಗಿದೆ.

### ಅಂತರ್ ಮಾನಸ

ಮಾನಸದ ಹುಟ್ಟು ಸ್ಥಳ. ಇದು ತಪೋನಗರದಿಂದ ಒಂದು ಕಿಲೋಮೀಟರ್ ದೂರದಲ್ಲಿರುವ ನಾಡಗೌಡ ಗೊಲ್ಲಹಳ್ಳಿಯ ಹತ್ತಿರ ಇದೆ. ಅಲ್ಲಿ ಗುರೂಜಿಯವರು 1987 ರಿಂದ 1992 ರವರೆಗೆ ವಾಸಮಾಡಿದ ಒಂದು ಗುಡಿಸಲು ಮತ್ತು ಇತರೆ ಕಟ್ಟಡಗಳಿವೆ.

### ಅಧ್ಯಯನ ಕೇಂದ್ರ

ಇದು ಆಧ್ಯಾತ್ಮಿಕ ಸತ್ಯಗಳ ಅಧ್ಯಯನಕ್ಕಾಗಿ ಅಂತರ್ಮಾನಸದಲ್ಲಿ ಋಷಿಗಳ ಮಾರ್ಗದರ್ಶನದಲ್ಲಿರುವ ಒಂದು ವಿಶೇಷವಾದ ಅಧ್ಯಯನ ಕೇಂದ್ರ.

### ಜ್ಯೋತಿ ಪ್ರಾಜೆಕ್ಟ್

ಇದು ಮುಖ್ಯವಾಗಿ ಹಳ್ಳಿಯ ಮಕ್ಕಳಿಗೆ ಮೀಸಲಾದದ್ದು. ಅವರಿಗೆ ಶಾಲೆಯ ಪಾಠಗಳಲ್ಲಿ ನೆರವಾಗುವುದಲ್ಲದೆ ಶ್ಲೋಕಗಳು, ಶುಚಿತ್ವ, ಹಾಡುಗಳು, ಸಾಮಾನ್ಯಜ್ಞಾನ ಇತ್ಯಾದಿಗಳನ್ನು ಕಲಿಸಲಾಗುತ್ತದೆ. ಅಲ್ಲದೆ ಕಥೆಗಾರಿಕೆ, ಸಂಗೀತ ಮತ್ತು ಚಿತ್ರಕಲೆಗಳ ಮೂಲಕ ಅವರಲ್ಲಿನ ಸೃಜನಶೀಲತೆಯನ್ನು ವ್ಯಕ್ತಪಡಿಸಲು ಪ್ರೋತ್ಸಾಹಿಸಲಾಗುತ್ತದೆ.

### ಲೈಟ್ ಚಾನೆಲಿಂಗ್

ಪ್ರತಿ ಶುಕ್ರವಾರ ಬೆಳಿಗ್ಗೆ 10 ರಿಂದ 1 ರವರೆಗೆ ಗುರೂಜಿಯವರೊಂದಿಗೆ ಧ್ಯಾನಿಗಳು ಲೈಟ್ ಚಾನೆಲಿಂಗ್ ಅನ್ನು ಮಾಡುತ್ತಾರೆ. ಯಾರಾದರೂ ಇದರಲ್ಲಿ ಭಾಗವಹಿಸಬಹುದು.

### ಸಾರ್ವಜನಿಕರು

ಎಲ್ಲ ದಿನಗಳಲ್ಲೂ ಬೆಳಿಗ್ಗೆ 10ರಿಂದ 5ರ ನಡುವೆ ಧ್ಯಾನಮಾಡಲು ಇಲ್ಲಿಗೆ ಬರಬಹುದು.

### ವಿನಂತಿ

ದಯವಿಟ್ಟು ನಮ್ಮ ಸೇವಾಕಾರ್ಯಗಳಿಗೆ ನೆರವಾಗಿ. ('ಮಾನಸ ಫೌಂಡೇಷನ್'ನ ಹೆಸರಿನಲ್ಲಿ ಚೆಕ್/ಡಿಡಿ ಪಡೆಯಬಹುದು.)

## ಆಧ್ಯಾತ್ಮಿಕ ಅನುಭವಗಳು

(ಸಂಗ್ರಹ: ಸುಧಾಕರ್, ಅನು: ಸ್ವರ್ಣಲತ)

15–4–09ರ ಓರಿಯಂಟೇಷನ್ ತರಗತಿಯಲ್ಲಿ ಗುರೂಜಿಯವರು ಕೊಟ್ಟ "ಮೂರನೆಯ ಕಣ್ಣಿನ ತಂತ್ರ" ವನ್ನು ಅಭ್ಯಾಸ ಮಾಡುತ್ತಿದ್ದಾಗ, ಹೊಂಬಣ್ಣದ ಬೆಳಕು ನನ್ನ ಮೂರನೆಯ ಕಣ್ಣಿನಿಂದ ಹೊರಬಂದದ್ದನ್ನು ಕಂಡೆ. ನಂತರ ಮಂಜಿನಿಂದ ಪೂರ್ಣವಾಗಿ ಆವರಿಸಿದ್ದ ಒಂದು ನಗರವನ್ನು ನೋಡಿದೆ. ರಸ್ತೆಗಳೆಲ್ಲವೂ ಮಂಜಿನ ಸ್ಲೈಡುಗಳಂತೆ ಕಾಣುತ್ತಿದ್ದವು. ನಂತರ ಬೆಂಕಿ ಹಾಗೂ ಹೊಗೆಯಿಂದ ಆವರಿಸಿದ್ದ ಅನೇಕ ಎತ್ತರವಾದ ಕಟ್ಟಡಗಳನ್ನು ಹೊಂದಿದ್ದ ಒಂದು ನಗರವನ್ನು ನೋಡಿದೆ.

"ಅರಿವಿನ ಏರಿಕೆ" ಹಾಗೂ "ಸಮಾಧಿ ಅನುಭವ"ದ ತಂತ್ರಗಳನ್ನು ಅಭ್ಯಾಸ ಮಾಡುತ್ತಿದ್ದಾಗ, ಕಣ್ಣು ಕೋರೈಸುವಂತಹ ಪ್ರಕಾಶಮಾನವಾದ ಬೆಳಕನ್ನು ಕಂಡೆ. ನಾನು ಕಣ್ಮುಚ್ಚಿದ್ದರೂ ಮತ್ತೆ ಕಣ್ಮುಚ್ಚಬೇಕೆಂಬಷ್ಟು ತೀವ್ರವಾಗಿತ್ತು ಆ ಬೆಳಕು. ನಾನು ಗಾಳಿ ತುಂಬಿದ ಬಲೂನಿನಂತಾಗಿ ಇಡೀ ವಿಶ್ವವನ್ನೇ ಆವರಿಸಿದೆ. ಈ ಅನುಭವ ತರಗತಿ ಕೊನೆಯಾಗುವವರೆಗೂ ಇತ್ತು. ಧ್ಯಾನದ ನಂತರವೂ ಸಹ ನನ್ನ ದೇಹ ಹಗುರವಾಗಿದ್ದಂತೆ ಭಾಸವಾಯಿತು. —ನಾಗಶ್ರೀ

ಸೂಕ್ಷ್ಮ ಮಟ್ಟದಲ್ಲಿ ನಡೆಯುವ ಒಂದು ತರಗತಿಯಲ್ಲಿ ಗುರೂಜಿಯವರು ನಮಗೆಲ್ಲ ಏನನ್ನೋ ಕಲಿಸುತ್ತಿದ್ದರು. ಬೆಳಗಿನ ಮಂಜಿನಿಂದ ಮುಸುಕಿದ ಬೆಳಕು ಅಲ್ಲೆಲ್ಲ ಹರಡಿತ್ತು. ಅಲ್ಲೆಲ್ಲ ಹರಡಿದ್ದ ಬಿಳಿಯ ಬೆಳಕನ್ನು ಸ್ಪಷ್ಟವಾಗಿ ಗುರುತಿಸಬಹುದಿತ್ತು. ನಾನು ಭೌತಿಕಕ್ಕಿಂತ ಸೂಕ್ಷ್ಮ ಮಟ್ಟದಲ್ಲಿ ಅನುಭವಿಸುವುದು ಹೆಚ್ಚು ಸುಲಭವಾಗಿತ್ತು. ಗುರೂಜಿಯವರನ್ನು ಒಂದು ಅತ್ಯಂತ ಪ್ರಕಾಶಮಾನವಾದ ಬಿಳಿಯ ಬೆಳಕು ಎಲ್ಲ ಕಡೆಯಿಂದಲೂ ಆವರಿಸಿತ್ತು. ಅದು ಅವರದೇ ಪ್ರಭೆಯೇನೋ ಎಂಬಂತಿತ್ತು. ವಿದ್ಯಾರ್ಥಿಗಳೆಲ್ಲರೂ ನೆಲದ ಮೇಲೆ ಕುಳಿತಿದ್ದರು. ಗುರೂಜಿಯವರು ಎಲ್ಲರ ನಡುವೆ ನಡೆದಾಡುತ್ತಿದ್ದರು. ಇಬ್ಬರು ದೇವತೆಗಳು ಅವರೊಡನೆ ಕೆಲವು ವಿದ್ಯಾರ್ಥಿಗಳ ಪ್ರಗತಿಯ ಬಗ್ಗೆ ಮಾತನಾಡುತ್ತಿದ್ದರು. ಅದೇ ದೃಶ್ಯವನ್ನು ನನ್ನ ಧ್ಯಾನದಲ್ಲಿ ಎರಡು ಮೂರು ಬಾರಿ ಕಂಡೆ. —ಸಲೀಲ್ ಕಾರ್ಖಾನಿಸ್

ನಾನು ಪ್ರಕೃತಿ, ಮರಗಿಡಗಳು, ಮೋಡಗಳು, ಆಕಾಶ ಇತ್ಯಾದಿಗಳೊಂದಿಗೆ ಸಂಭಾಷಿಸಲು ಪ್ರಯತ್ನಿಸುತ್ತಿದ್ದೇನೆ. ಇತ್ತೀಚೆಗೆ ನಮ್ಮ ಫ್ಲಾಟ್ ಬಳಿ ಇರುವ ಒಂದು ಮರ "ನಿಮ್ಮ ಮಾನಸಿಕ ಒತ್ತಡವನ್ನು ನಾವು ಹೇಗೆ ಕಡಿಮೆ ಮಾಡಬಹುದು" ಎಂದು ಕೇಳಿತು. ಅದಕ್ಕೆ ನಾನು "ನಮಗಿಂತ ಚೆನ್ನಾಗಿ ನಿಮಗೇ ಗೊತ್ತಿದೆ" ಎಂದು ತಿಳಿಸಿದೆ. ಅದೇ ದಿನ ನಮ್ಮ ತಾಯಿಯವರ ಅನಾರೋಗ್ಯದ ಬಗ್ಗೆ ನಾನು ಸ್ವಲ್ಪ ಕಳವಳಗೊಂಡಿದ್ದೆ. ಆಗ "ನಿನಗೆ ಕಠಿಣ ಪರಿಸ್ಥಿತಿಯನ್ನು ಎದುರಿಸುವ ಸಾಮರ್ಥ್ಯ ಇದೆ" ಎಂದು ಮೋಡಗಳು ತಿಳಿಸಿದವು. —ಬ್ರಜಬಂಧು ಮಿಶ್ರ

ಕೆಲವು ತಿಂಗಳುಗಳಿಂದ ನಮ್ಮ ಮನೆಯೊಳಗೆ ಎರೆಹುಳುಗಳು ಬರುತ್ತಿದ್ದವು. ಅದನ್ನು ತಡೆಯಲು ನಾವು ಅನುಸರಿಸಿದ ಎಲ್ಲ ಪ್ರಯತ್ನಗಳೂ ವಿಫಲವಾದವು. ಕೆಲವು ದಿನಗಳ ಹಿಂದೆ ನಾನು ಧ್ಯಾನ ಮಾಡುತ್ತಿದ್ದಾಗ ಅವುಗಳೊಡನೆ 'ಒಳ ಬರಬೇಡಿ, ಬಂದರೆ ನೀವು ಕೊಲ್ಲಲ್ಪಡುತ್ತೀರ. ಯಾವುದಾದರೂ ಸುರಕ್ಷಿತ ಸ್ಥಳಕ್ಕೆ ಹೋಗಿ' ಎಂದು ಪ್ರಾರ್ಥಿಸಿದೆ. ಅಂದಿನಿಂದಲೇ ಅವುಗಳು ಬರುವುದನ್ನು ನಿಲ್ಲಿಸಿದ್ದು ನನಗೆ ಅತ್ಯಂತ ಅಶ್ಚರ್ಯವಾಯಿತು. —ಅರ್ಚನಾ ಕೌಲ್

ಕೆಲವು ದಿನಗಳಿಂದ ನಾನು ತೀವ್ರವಾದ ಕಣ್ಣು ನೋವಿನಿಂದ ಬಳಲುತ್ತಿದ್ದೆ. ಕಣ್ಣಿನ ವೈದ್ಯರು ನಿಮ್ಮ ಈ ಸಮಸ್ಯೆಗೆ ಪರಿಹಾರವೇ ಇಲ್ಲ ಎಂದು ತಿಳಿಸಿದ್ದರು. ಆದರೆ ಓರಿಯಂಟೇಶನ್ ತರಗತಿಯ ನಂತರ ನನ್ನ ಕಣ್ಣಿನ ತೊಂದರೆ ಆಶ್ಚರ್ಯಕರವಾಗಿ ಮಾಯವಾಗಿದೆ. —ಭಾಗ್ಯವತಿ

ಒಂದು ದಿನ ಮೂರು ವರ್ಷಗಳಿಂದ ಸಂಪರ್ಕವೇ ಇಲ್ಲದಿದ್ದ ಒಬ್ಬ ಅಮೇರಿಕಾದ ಮಹಿಳೆ ಹಾಗೂ ಅಮೇರಿಕಾದಲ್ಲೇ ವಾಸಿಸುತ್ತಿರುವ ನನ್ನ ಸಹೋದರಿಯ ಬಗ್ಗೆ ಬಲವಾದ ನೆನಪಾಯಿತು. ನಂತರ ಅವರಿಬ್ಬರೂ ಅದೇ ಸಮಯದಲ್ಲಿ ದೂರವಾಣಿಯ ಮೂಲಕ ಸಂಪರ್ಕಿಸುತ್ತಿದ್ದುದು ತಿಳಿಯಿತು.

ಅಕ್ಷಯ ತೃತೀಯದ ದಿನ ನಾನು ಧ್ಯಾನ ಮಾಡುತ್ತಿದ್ದಾಗ ಯಾರೋ ಒಬ್ಬ ವ್ಯಕ್ತಿ 'ಓಂ ನಮಃ ಶಿವಾಯ' ಎಂದು ಉಚ್ಚರಿಸುತ್ತಿದ್ದದ್ದು ಕೇಳಿಸಿತು. ಅದರ ಹಿನ್ನೆಲೆಯಲ್ಲಿ ತಂಬೂರಿಯ ನಾದವೂ ಕೂಡ ಕೇಳಿಸುತ್ತಿತ್ತು. ನಂತರ ಅಲ್ಲಿ ಸಂಪೂರ್ಣ ಮೌನ ನೆಲೆಸಿತು. ತದನಂತರ ಯಾರೋ 'ನಾರಾಯಣ, ನಾರಾಯಣ' ಎಂದು ಉಚ್ಚರಿಸುತ್ತಿದ್ದುದು ಕೇಳಿಸಿತು. —ಕೇಟಕಿ ತಲ್‌ವಾಲ್‌ಕರ್

ತಪೋವಾಣಿ, ಕನ್ನಡ ಮಾಸಪತ್ರಿಕೆ, ವಾರ್ಷಿಕ ಚಂದಾ : ರೂ.200/–
ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು : ಶ್ಯಾಮಲಾ ದೇವಿ, ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149 ಮಾನಸ ಫೌಂಡೇಷನ್ (ರಿ.) ಪರವಾಗಿ.
ಮಾಲೀಕರು : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಪ್ರಕಾಶನ ಸ್ಥಳ : ಮಾನಸ ಫೌಂಡೇಷನ್ (ರಿ.), ತಪೋನಗರ, ಚಿಕ್ಕಗುಬ್ಬಿ, ಬೆಂಗಳೂರು ಅರ್ಬನ್ – 562 149
ಮುದ್ರಣ ಸ್ಥಳ : ಆರ್ಟ್ ಪ್ರಿಂಟ್, 719/ಎ, ವೆಸ್ಟ್ ಆಫ್ ಕಾರ್ಡ್ ರೋಡ್, 2ನೇ ಸ್ಟೇಜ್, ರಾಜಾಜಿನಗರ, ಬೆಂಗಳೂರು – 560 086. ಫೋನ್ : 2335 9992
ಸಂಪಾದಕರು : ಶ್ಯಾಮಲಾ ದೇವಿ